# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ

ಸಂ/ಕರಾಸಾ/ಮಂಡ್ಯ,ವಿ/ಸಂ/ವಾ/560/2021-22 ದಿನಾಂಕ:-02/11/2021

**ಇ-ಟೆಂಡರ್ ಹಾಗೂ ಮ್ಯಾನ್ಯುಯಲ್ ಟೆಂಡರ್ ಪ್ರಕಟಣೆ ಸಂ:06/2021-22**

ಕ.ರಾ.ರ.ಸಾ.ನಿಗಮ ಮಂಡ್ಯ ವಿಭಾಗಕ್ಕೆ ಸೇರಿದ ಈ ಕೆಳಗಿನ ವಾಹನ ನಿಲ್ದಾಣಗಳಲ್ಲಿ ಖಾಲಿಯಿರುವ, ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗೆ ಪರವಾನಗಿದಾರರನ್ನು ಇ-ಟೆಂಡರ್ ಹಾಗೂ ಮ್ಯಾನ್ಯುಯಲ್ ಟೆಂಡರ್ ಮೂಲಕ ಆಯ್ಕೆ ಮಾಡುವ ಸಲುವಾಗಿ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ. ವಿವರ ಈ ಕೆಳಕಂಡಂತಿವೆ.

| ಇ-ಟೆಂಡರ್‌ಗೆ ಒಳಪಟ್ಟಿರುವ ಮಳಿಗೆಗಳ ವಿವರ | | | | | | | |
|---|---|---|---|---|---|---|---|
| ಕ್ರ.ಸಂ | ಬಸ್ ನಿಲ್ದಾಣ | ಮಳಿಗೆ ವಿವರ | ವಿಸ್ತೀರ್ಣ ಚ.ಅ | ಅವಧಿ | ಮಾಸಿಕ ಪರವಾನಗಿ ಶುಲ್ಕ | ಇ.ಎಂ.ಡಿ | ಅರ್ಜಿ ಶುಲ್ಕ (ಜಿಎಸ್‌ಟಿ ಸೇರಿ) |
| 1 | ಮದ್ದೂರು | ತೆರೆದ ಸ್ಥಳ-01-ಜನರಲ್ ಸ್ಟಾಲ್ | 15'*10'=150 | 3 ವರ್ಷ | 37,645.00 | 1,12,935.00 | 444.00 |
| 2 | ಮದ್ದೂರು | ತೆರೆದ ಸ್ಥಳ-03-ಜನರಲ್ ಸ್ಟಾಲ್ | 450 | 3 ವರ್ಷ | 80,666.00 | 2,41,998.00 | 952.00 |
| 3 | ಪಾಂಡವಪುರ | ಜನರಲ್ ಸ್ಟಾಲ್-3 ದಿ:04.11.2021ರಿಂದ ಖಾಲಿಯಾಗಲಿದೆ | 226.52 | 5 ವರ್ಷ | 9,760.00 | 29,280.00 | 118.00 |
| 4 | ಶ್ರೀರಂಗಪಟ್ಟಣ | ಜನರಲ್ ಸ್ಟಾಲ್-7 (ಪರಿಶಿಷ್ಟ ಜಾತಿಗೆ ಮೀಸಲು) | 227.57 | 5 ವರ್ಷ | 10,889.00 | 32,667.00 | 129.00 |
| 5 | ಶ್ರೀರಂಗಪಟ್ಟಣ | ಜನರಲ್ ಸ್ಟಾಲ್-6 ದಿ:15.03.2022 ರಿಂದ ಖಾಲಿಯಾಗಲಿದೆ | 227.57 | 5 ವರ್ಷ | 10,396.00 | 31,188.00 | 123.00 |
| 6 | ಕೆ.ಆರ್.ಪೇಟೆ | ಜನರಲ್ ಸ್ಟಾಲ್ -4 (ಅಂದಾಜು ಕಾಮಗಾರಿ ಮುಕ್ತಾಯದ ದಿನಾಂಕ:01/12/2021) | 144.03 | 5 ವರ್ಷ | 9,625.00 | 28,875.00 | 118.00 |
| 7 | ಕೆ.ಆರ್.ಪೇಟೆ | ಜನರಲ್ ಸ್ಟಾಲ್ -5 (ಅಂದಾಜು ಕಾಮಗಾರಿ ಮುಕ್ತಾಯದ ದಿನಾಂಕ:01/12/2021) (ಪರಿಶಿಷ್ಟ ಪಂಗಡಕ್ಕೆ ಮೀಸಲು) | 142.16 | 5 ವರ್ಷ | 9,500.00 | 28,500.00 | 118.00 |
| 8 | ಕೆ.ಆರ್.ಪೇಟೆ | ಜನರಲ್ ಸ್ಟಾಲ್ -6 (ಅಂದಾಜು ಕಾಮಗಾರಿ ಮುಕ್ತಾಯದ ದಿನಾಂಕ:01/12/2021) (ಪರಿಶಿಷ್ಟ ಜಾತಿಗೆ ಮೀಸಲು) | 137.01 | 5 ವರ್ಷ | 9,200.00 | 27,600.00 | 118.00 |
| 9 | ಕೆ.ಆರ್.ಪೇಟೆ | ಜನರಲ್ ಸ್ಟಾಲ್ -7 (ಅಂದಾಜು ಕಾಮಗಾರಿ ಮುಕ್ತಾಯದ ದಿನಾಂಕ:01/12/2021) | 143.09 | 5 ವರ್ಷ | 9,600.00 | 28,800.00 | 118.00 |
| 10 | ಕೆ.ಆರ್.ಪೇಟೆ | ಜನರಲ್ ಸ್ಟಾಲ್ -8 (ಅಂದಾಜು ಕಾಮಗಾರಿ ಮುಕ್ತಾಯದ ದಿನಾಂಕ:01/12/2021) | 171.15 | 5 ವರ್ಷ | 11,500.00 | 34,500.00 | 136.00 |
| 11 | ಕೆ.ಆರ್.ಪೇಟೆ | ಜನರಲ್ ಸ್ಟಾಲ್ -9 (ಅಂದಾಜು ಕಾಮಗಾರಿ ಮುಕ್ತಾಯದ ದಿನಾಂಕ:01/12/2021) (ವಿಶೇಷ ಚೇತನರಿಗೆ ಮೀಸಲು) | 167.41 | 5 ವರ್ಷ | 11,500.00 | 34,500.00 | 136.00 |
| 12 | ಕೆ.ಆರ್.ಪೇಟೆ | ಜನರಲ್ ಸ್ಟಾಲ್ -10 (ಅಂದಾಜು ಕಾಮಗಾರಿ ಮುಕ್ತಾಯದ ದಿನಾಂಕ:01/12/2021) | 146.37 | 5 ವರ್ಷ | 9,800.00 | 29,400.00 | 118.00 |
| 13 | ಕೆ.ಆರ್.ಪೇಟೆ | ಜನರಲ್ ಸ್ಟಾಲ್ -11 (ಅಂದಾಜು ಕಾಮಗಾರಿ ಮುಕ್ತಾಯದ ದಿನಾಂಕ:01/12/2021) | 146.37 | 5 ವರ್ಷ | 9,800.00 | 29,400.00 | 118.00 |
| 14 | ಕೆ.ಆರ್.ಪೇಟೆ | ದ್ವಿ-ಚಕ್ರ ವಾಹನ ನಿಲ್ದಾಣ (ತೆರೆದ ಸ್ಥಳ ನೆಲ ಮಾಳಿಗೆ) (ಅಂದಾಜು ಕಾಮಗಾರಿ ಮುಕ್ತಾಯದ ದಿನಾಂಕ:01/12/2021) | 1782.62 | 3 ವರ್ಷ | 20,288.00 | 60,864.00 | 240.00 |
| ಮ್ಯಾನ್ಯುಯಲ್ ಟೆಂಡರ್‌ಗೆ ಒಳಪಟ್ಟಿರುವ ಮಳಿಗೆಗಳ ವಿವರ | | | | | | | |
| 1 | ಮೇಲುಕೋಟೆ | ಉಪಹಾರ ಗೃಹ | 1167 | 5 ವರ್ಷ | 3,660.00 | 10,980.00 | 118.00 |
| 2 | ಬನ್ನೂರು | ಜನರಲ್ ಸ್ಟಾಲ್-3 | 123.41 | 5 ವರ್ಷ | 5,125.00 | 15,375.00 | 118.00 |

ಇ-ಟೆಂಡರ್ ಹಾಗೂ ಮ್ಯಾನ್ಯುಯಲ್ ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ "http://www.eproc.karnataka.gov.in" ನಿಂದ ಅಥವಾ ನಿಗಮದ ವೆಬ್ ಸೈಟ್ "http://ksrtc.karnataka.gov.in"ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

| ಕ್ರ. ಸಂ. | ವಿವರ | ದಿನಾಂಕ | ಸಮಯ |
|---|---|---|---|
| 1 | ಇ-ಟೆಂಡರ್ ಅರ್ಜಿಗಳನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸಲು ಹಾಗೂ ಮ್ಯಾನ್ಯುಯಲ್ ಟೆಂಡರ್ ಅರ್ಜಿಯನ್ನು ಕಛೇರಿಯಲ್ಲಿ ಪಡೆದುಕೊಳ್ಳಲು ಕಡೆಯ ದಿನಾಂಕ ಮತ್ತು ಸಮಯ (ಸರ್ಕಾರಿ ರಜೆ & ಭಾನುವಾರ ಹೊರತುಪಡಿಸಿ ಕಛೇರಿ ಸಮಯದಲ್ಲಿ ಮಾತ್ರ ಹಾಗೂ ಪ್ರತಿ ಶನಿವಾರ ಮದ್ಯಾಹ್ನ:1.30ರವರೆಗೆ ಮಾತ್ರ) | ದಿ:25.11.2021 | 17.00 |
| 2 | ಅರ್ಜಿದಾರರು ಇ-ಟೆಂಡರ್ ಹಾಗೂ ಮ್ಯಾನ್ಯುಯಲ್ ಟೆಂಡರ್ ಅರ್ಜಿ ಶುಲ್ಕ, ಇಎಂಡಿ ಶುಲ್ಕದ ಮೂಲ ಡಿ.ಡಿ. ಹಾಗೂ ಇತರೆ ಅಗತ್ಯ ದಾಖಲಾತಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಮಂಡ್ಯ ವಿಭಾಗೀಯ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸುವ ದಿನಾಂಕ ಮತ್ತು ಸಮಯ.(ಸರ್ಕಾರಿ ರಜೆ & ಭಾನುವಾರ ಹೊರತುಪಡಿಸಿ ಕಛೇರಿ ಸಮಯದಲ್ಲಿ ಮಾತ್ರ ಹಾಗೂ ಪ್ರತಿ ಶನಿವಾರ ಮದ್ಯಾಹ್ನ:1.30ರವರೆಗೆ ಮಾತ್ರ) | ದಿ:26-11-2021ರ ಸಮಯ 10.30 ರಿಂದ ದಿ:29-11-2021 ರ ಸಮಯ 17.00ರವರೆಗೆ | |
| 3 | ಇ-ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ | ದಿ:30.11.2021 | 11.00am |
| 4 | ಮ್ಯಾನ್ಯುಯಲ್ ಟೆಂಡರ್ ನಡೆಸುವ ದಿನಾಂಕ ಮತ್ತು ಸಮಯ | ದಿ:30.11.2021 | 15.30 |

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ ಮಂಡ್ಯ ವಿಭಾಗ, ಮಂಡ್ಯ ಇಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ-7760990652, 7760990661, 7337680837.

ಸಹಿ/-

ವಿಭಾಗೀಯ ನಿಯಂತ್ರಣಾಧಿಕಾರಿ

ಕ.ರಾ.ರ.ಸಾ.ನಿಗಮ,ಮಂಡ್ಯ ವಿಭಾಗ, ಮಂಡ್ಯ

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ

ಗೌರವ ಪೂರ್ವಕವಾಗಿ ಪ್ರತಿಯನ್ನು:-
ಮುಖ್ಯ ಸಂಚಾರ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಬೆಂಗಳೂರುರವರಿಗೆ ಹಾಗೂ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿರವರಿಗೆ ಮಾಹಿತಿಗಾಗಿ.

ಪ್ರತಿಯನ್ನು:-

1. ಘಟಕ ವ್ಯವಸ್ಥಾಪಕರು ಮಂಡ್ಯ, ಮದ್ದೂರು, ಮಳವಳ್ಳಿ, ನಾಗಮಂಗಲ, ಕೆ,ಆರ್.ಪೇಟೆ ಹಾಗೂ ಪಾಂಡವಪುರ ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಘಟಕದ & ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಸೂಚಿಸಲಾಗಿದೆ. ಎಲ್ಲಾ ಘಟಕ ವ್ಯವಸ್ಥಾಪಕರುಗಳ ಮಾಹಿತಿಗಾಗಿ, ಹಾಗೂ ಹಾಗೂ ಘಟಕ ವ್ಯವಸ್ಥಾಪಕರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್/ನೀರಿನ ವ್ಯವಸ್ಥೆ ಇಲ್ಲದಿರುವ ಬಗ್ಗೆ ಮಾಹಿತಿಯನ್ನು ಸಂಚಾರ ಶಾಖೆಗೆ ನೀಡುವುದು ಹಾಗೂ ಸಂಧಾನ/ಟೆಂಡರ್ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದೊಳಗೆ ಸರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.
2. ವಿಭಾಗೀಯ ಸಂಚಲನಾಧಿಕಾರಿ/ಸಹಾಯಕ ಕಾನೂನು ಅಧಿಕಾರಿ/ಸಹಾಯಕ ಭದ್ರತಾ & ಜಾಗೃತಾಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಸಹಾಯಕ ಲೆಕ್ಕಾಧಿಕಾರಿ, ಮಂಡ್ಯ ವಿಭಾಗರವರುಗಳು ಸಂಧಾನ/ಟೆಂಡರ್ ತೆರೆಯುವ ಸಮಯದಲ್ಲಿ ಹಾಜರಿರಲು ಸೂಚಿಸಲಾಗಿದೆ ಹಾಗೂ ಸ.ಕಾ.ನಿ.ಅ.ರವರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಮೂಲಭೂತ ಕಾಮಗಾರಿ ಮತ್ತು ವಿದ್ಯುತ್ ಕೆಲಸಗಳನ್ನು ಸಂಧಾನ/ಟೆಂಡರ್ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದೊಳಗೆ ಸರಿಪಡಿಸಿ ನೀಡಲು ತಿಳಿಸಲಾಗಿದೆ.
3. ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿ, ವಾ.ಕ.ರ.ಸಾ.ನಿ, ಈ.ಕ.ರ.ಸಾ.ನಿ, ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ

## ಮಂಡ್ಯ ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಿಗೆಗಳಿಗೆ ಪರವಾನಿಗೆಗಾಗಿ ಇ-ಟೆಂಡರ್ ಹಾಗೂ ಮ್ಯಾನ್ಯುಯಲ್ ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳು

1. ಬಿಡ್‌ದಾರರು ಇ-ಟೆಂಡರ್‌ಗೆ ಅರ್ಜಿಗಳನ್ನು ಹಾಗೂ ದಾಖಲಾತಿಗಳನ್ನು ಆನ್‌ಲೈನ್ ಮುಖಾಂತರವೇ ಸಲ್ಲಿಸುವುದು.
2. ಬಿಡ್‌ದಾರರು ಮ್ಯಾನ್ಯುಯಲ್ ಟೆಂಡರ್‌ಗೆ ಅರ್ಜಿಗಳನ್ನು ಆನ್‌ಲೈನ್ ಮೂಲಕ ಅಥವಾ ನಿಗಧಿತ ಅವಧಿಯಲ್ಲಿ ವಿಭಾಗೀಯ ಕಛೇರಿ, ಮಂಡ್ಯ ವಿಭಾಗ, ಕ.ರಾ.ರ.ಸಾ.ನಿಗಮ, ಮಂಡ್ಯ ಇಲ್ಲಿ ಕಛೇರಿ ಸಮಯದಲ್ಲಿ ಪಡೆಕೊಳ್ಳುವುದು. ಸದರಿ ಅರ್ಜಿಯನ್ನು ಭರ್ತಿ ಮಾಡಿ ಸಹಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ ನಿಗಧಿತ ಅವಧಿ ಹಾಗೂ ಸಮಯದಲ್ಲಿ ವಿಭಾಗೀಯ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸುವುದು. ನೇರವಾಗಿ ಸ್ವೀಕರಿಸಲಾಗುವುದಿಲ್ಲ.
3. ಮೇಲ್ಕಂಡಂತೆ ನಿಗದಿಪಡಿಸಿದ ಅರ್ಜಿ ಶುಲ್ಕವನ್ನು ಹಾಗೂ ಇ.ಎಂ.ಡಿ ಮೊತ್ತವನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗುವ ಇ-ಟೆಂಡರ್ ಪ್ರಕ್ರಿಯೆಗೆ ಪ್ರತ್ಯೇಕವಾಗಿ "Divisional Controller, K.S.R.T.C., Mandya Division, Mandya" ಇವರ ಹೆಸರಿಗೆ ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕ್‌ನಿಂದ ಪಡೆದು ಅರ್ಜಿ ಶುಲ್ಕ ಮತ್ತು ಇಎಂಡಿ ಮೊತ್ತದ ಮೂಲ ಡಿ.ಡಿ. ಗಳನ್ನು ಹಾಗೂ ಇ-ಪೋರ್ಟಲ್‌ನಲ್ಲಿ ಸಲ್ಲಿಸಿರುವ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಮುಚ್ಚಿದ ಲಕೋಟೆಯಲ್ಲಿ ಮೇಲೆ ತಿಳಿಸಿರುವ ದಿನಾಂಕ ಮತ್ತು ಸಮಯದೊಳಗೆ ಟೆಂಡರ್ ಬಾಕ್ಸ್‌ನಲ್ಲಿ ಹಾಕುವುದು. ಸದರಿ ದಾಖಲಾತಿಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕ ಮತ್ತು ಸಮಯದ ಮುಂಚಿತಾವಾಗಿ ಮತ್ತು ಸದರಿ ದಿನಾಂಕ ಮತ್ತು ಸಮಯ ಮುಕ್ತಾಯದ ನಂತರ ಸ್ವೀಕರಿಸಲಾಗುವುದಿಲ್ಲ. ನಿಗಧಿತ ದಿನಾಂಕ ಮತ್ತು ಸಮಯದೊಳಗೆ ಅರ್ಜಿ ಡಿ.ಡಿ, ಇಎಂಡಿ ಡಿ.ಡಿ ಮತ್ತು ಇ-ಪೋರ್ಟಲ್‌ನಲ್ಲಿ ಸಲ್ಲಿಸಿರುವ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಇ-ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ/ಅರ್ಜಿ ಸಲ್ಲಿಸುವ ಅರ್ಜಿದಾರರು ಚಾಲ್ತಿಯಲ್ಲಿರುವ ತಮ್ಮ ಮೊಬೈಲ್/ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು. ಸದರಿ ಅರ್ಜಿ ಶುಲ್ಕದ ಡಿ.ಡಿ. ಮತ್ತು ಇಎಂಡಿ ಮೊತ್ತದ ಡಿ.ಡಿ.ಗಳನ್ನು ಇ-ಪೋರ್ಟಲ್‌ನಲ್ಲೂ ಅಪ್‌ಲೋಡ್ ಮಾಡುವುದು.
4. ಮೇಲ್ಕಂಡಂತೆ ನಿಗದಿಪಡಿಸಿದ ಅರ್ಜಿ ಶುಲ್ಕವನ್ನು ಹಾಗೂ ಇ.ಎಂ.ಡಿ ಮೊತ್ತವನ್ನು ಹಾಗೂ ಮ್ಯಾನ್ಯುಯಲ್ ಟೆಂಡರ್ ಮೂಲಕ ಆಹ್ವಾನಿಸಲಾಗುವ ಮಳಿಗೆಗಳಿಗೆ ಪ್ರತ್ಯೇಕವಾಗಿ "Divisional Controller, K.S.R.T.C., Mandya Division, Mandya" ಇವರ ಹೆಸರಿಗೆ ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕ್‌ನಿಂದ ಪಡೆದು ಸದರಿ ಅರ್ಜಿ ಶುಲ್ಕದ ಡಿ.ಡಿ. ಮತ್ತು ಇಎಂಡಿ ಮೊತ್ತದ ಡಿ.ಡಿ.ಗಳ ಮೂಲ ಪ್ರತಿ ಹಾಗೂ ಅಗತ್ಯ ದಾಖಲಾತಿಗಳ ಜೆರಾಕ್ಸ್ ಪ್ರತಿಗಳನ್ನು ಭರ್ತಿ ಮಾಡಿ ಸಹಿ ಮಾಡಿದ ಅರ್ಜಿಯೊಂದಿಗೆ ಮುಚ್ಚಿದ ಲಕೋಟೆಯಲ್ಲಿ ಮೇಲೆ ತಿಳಿಸಿರುವ ದಿನಾಂಕ ಮತ್ತು ಸಮಯದೊಳಗೆ ಟೆಂಡರ್ ಬಾಕ್ಸ್‌ನಲ್ಲಿ ಹಾಕುವುದು. ಸದರಿ ದಾಖಲಾತಿಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕ ಮತ್ತು ಸಮಯದ ಮುಂಚಿತಾವಾಗಿ ಮತ್ತು ಸದರಿ ದಿನಾಂಕ ಮತ್ತು ಸಮಯ ಮುಕ್ತಾಯದ ನಂತರ ಸ್ವೀಕರಿಸಲಾಗುವುದಿಲ್ಲ. ನಿಗಧಿತ ದಿನಾಂಕ ಮತ್ತು ಸಮಯದೊಳಗೆ ಮೂಲ ಅರ್ಜಿ ಡಿ.ಡಿ, ಇಎಂಡಿ ಡಿ.ಡಿ ಮತ್ತು ಅಗತ್ಯ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಮಾನ್ಯುಯಲ್ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ/ಅರ್ಜಿ ಸಲ್ಲಿಸುವ ಅರ್ಜಿದಾರರು ಚಾಲ್ತಿಯಲ್ಲಿರುವ ತಮ್ಮ ಮೊಬೈಲ್/ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು. ಮೂಲ ಅಗತ್ಯ ದಾಖಲೆಗಳನ್ನು ಟೆಂಡರ್ ನಡೆಸುವ ಸಮಯದಲ್ಲಿ ಪರಶೀಲನೆಗೆ ಹಾಜರು ಪಡಿಸುವುದು.
5. ಇ.ಎಂ.ಡಿ. ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
6. ಪರವಾನಗಿದಾರರು RTGS / NEFT ಮೂಲಕ ಪಾವತಿ ಮಾಡುವಾಗ ಬಸ್ ನಿಲ್ದಾಣ, ಮಳಿಗೆ ಸಂಖ್ಯೆ, ಪರವಾನಗಿದಾರರ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
7. ಬಿಡ್‌ದಾರರು ಇ-ಟೆಂಡರ್ ಮಳಿಗೆಗೆ ನಿಗದಿತ ಇ.ಎಂ.ಡಿ. ಮೊತ್ತದಲ್ಲಿ ರೂ.500/- ಇ-ಪೋರ್ಟಲ್ ಮುಖೇನ ಪಾವತಿಸುವುದು. ಇನ್ನುಳಿದ ಇ.ಎಂ.ಡಿ. ಮೊತ್ತವನ್ನು "Divisional Controller, K.S.R.T.C., Mandya Division, Mandya" ಇವರ ಹೆಸರಿಗೆ ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕ್‌ನಿಂದ ಡಿ.ಡಿ. ರೂಪದಲ್ಲಿ ಪಡೆದುಸದರಿ ದಾಖಲಾತಿಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕ ಮತ್ತು ಸಮಯದೊಳಗೆ ಖುದ್ದಾಗಿ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸುವುದು. ಸದರಿ ಡಿ.ಡಿ.ಯ ಜೆರಾಕ್ಸ್ ಪ್ರತಿಯನ್ನು ಇ-ಪೋರ್ಟಲ್‌ನಲ್ಲಿ ಇತರೆ ದಾಖಲಾತಿಗಳೊಂದಿಗೆ ಅಪ್‌ಲೋಡ್ ಮಾಡುವುದು. ಅರ್ಜಿ ಶುಲ್ಕದ ಮೊತ್ತದಲ್ಲಿಭಾಗಶಃ ಅಥವಾ ಅಪೂರ್ಣ ಮಾಹಿತಿಯ ಡಿ.ಡಿ.ಗಳನ್ನು ಸಲ್ಲಿಸುವಂತಿಲ್ಲ. ಮತ್ತು ನಿಗಧಿತ ಇಎಂಡಿ ಮೊತ್ತದಲ್ಲಿ ರೂ.500/- ಹೊರತುಪಡಿಸಿ ಉಳಿಕೆ ಇಎಂಡಿಯ ಪೂರ್ಣ ಮೊತ್ತದ ಬದಲಿಗೆ ಭಾಗಶಃ ಅಥವಾ ಅಪೂರ್ಣ ಮಾಹಿತಿಯ ಡಿ.ಡಿ.ಗಳನ್ನು ಸಲ್ಲಿಸುವಂತಿಲ್ಲ. ಅಂತಹ ಅರ್ಜಿ/ಬಿಡ್‌ನ್ನು ತಿರಸ್ಕರಿಸಲಾಗುವುದು.
8. ಬಿಡ್‌ದಾರರು ಮ್ಯಾನ್ಯುಯಲ್ ಟೆಂಡರ್ ಮಳಿಗೆಗಳಿಗೆ ನಿಗದಿಪಡಿಸಿರುವ ಪೂರ್ಣ ಇ.ಎಂ.ಡಿ. ಮೊತ್ತವನ್ನು "Divisional Controller, K.S.R.T.C., Mandya Division, Mandya" ಇವರ ಹೆಸರಿಗೆ ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕ್‌ನಿಂದ ಡಿ.ಡಿ. ರೂಪದಲ್ಲಿ ಪಡೆದುಸದರಿ ದಾಖಲಾತಿಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕ ಮತ್ತು ಸಮಯದೊಳಗೆ ಖುದ್ದಾಗಿ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸುವುದು. ಅರ್ಜಿ ಶುಲ್ಕದ ಹಾಗೂ ಇಎಂಡಿ ಶುಲ್ಕದ ಮೊತ್ತದಲ್ಲಿ ಭಾಗಶಃ ಅಥವಾ ಅಪೂರ್ಣ ಮಾಹಿತಿಯ ಡಿ.ಡಿ.ಗಳನ್ನು ಸಲ್ಲಿಸುವಂತಿಲ್ಲ. ಅಂತಹ ಅರ್ಜಿ/ಬಿಡ್‌ನ್ನು ತಿರಸ್ಕರಿಸಲಾಗುವುದು.
9. ನಿಗಧಿತ ಅರ್ಜಿ ಶುಲ್ಕದ ಡಿ.ಡಿ ಮತ್ತು ಇಎಂಡಿ ಮೊತ್ತದ ಡಿ.ಡಿ.ಯನ್ನು ಟೆಂಡರ್ ಕರೆಯಲಾದ ದಿನಾಂಕದಿಂದ ಟೆಂಡರ್ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದೊಳಗೆ ಮಾತ್ರ ಪಡೆದು ಸಲ್ಲಿಸುವುದು. ಟೆಂಡರ್ ಕರೆಯಲಾದ ಹಿಂದಿನ ದಿನಾಂಕದ ಅಥವಾ ಮುಕ್ತಾಯದ ನಂತರದ ಪಡೆದ ಡಿ.ಡಿ.ಗಳನ್ನು ಅಂಗೀಕರಿಸಲಾಗುವುದಿಲ್ಲ ಮತ್ತು ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.
10. ವಾಣಿಜ್ಯ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ

11. ಆಯ್ಕೆಯಾದ ಪರವಾನಗಿದಾರರು/ಹೆಚ್1 ಬಿಡ್ದಾರರರು ಕೆಳಕಂಡಂತೆ ನಿಗದಿತ ಭದ್ರತಾ ಠೇವಣಿ ಮೊತ್ತವನ್ನು ಹಾಗೂ ಒಂದು ತಿಂಗಳ ಪರವಾನಗಿ ಶುಲ್ಕ ಮತ್ತು ಜಿಎಸ್‌ಟಿ ಮೊತ್ತವನ್ನು ರಾಷ್ಟ್ರೀಕೃತ / ಶೆಡ್ಯೂಲ್ ಬ್ಯಾಂಕ್‌ನಿಂದ ಪಡೆದ ಡಿ.ಡಿ. / RTGS / NEFT ಮೂಲಕ ಆಯ್ಕೆ ಪತ್ರ ಸ್ವೀಕರಿಸಿದ 15 ದಿನದೊಳಗಾಗಿ ಪಾವತಿಸುವುದು.

| ಕ್ರ.ಸಂ. | ಪರವಾನಗಿ ಅವಧಿ | ಒಟ್ಟು ಪಾವತಿಸಿಕೊಳ್ಳಬೇಕಿರುವ ಭದ್ರತಾ ಠೇವಣಿ |
|---|---|---|
| 1 | 3 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 6 ಪಟ್ಟು |
| 2 | 5 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 8 ಪಟ್ಟು |
| 3 | 10 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 10 ಪಟ್ಟು |

12. ಭದ್ರತಾ ಠೇವಣಿಗೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
13. ಆಯ್ಕೆಗೊಂಡ ಪರವಾನಗಿದಾರರ ಇ.ಎಂ.ಡಿ. ಮೊತ್ತವನ್ನು ಭದ್ರತಾ ಠೇವಣಿ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು, ಪಾವತಿಸಬೇಕಾದ ಉಳಿಕೆ ಭದ್ರತಾ ಠೇವಣಿಯ ಮೊತ್ತವನ್ನು ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕ್‌ನಿಂದ ಪಡೆದ ಡಿ.ಡಿ./RTGS/NEFT ಮೂಲಕ ಪಾವತಿಸುವುದು. ವಿಭಾಗೀಯ ಕಛೇರಿಯ RTGS ವಿವರ ಈ ಕೆಳಕಂಡಂತಿದೆ ಬ್ಯಾಂಕ್ ಹೆಸರು: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಶಾಖೆ: ವಿ.ವಿ.ರೋಡ್, ಮಂಡ್ಯ, ಖಾತೆದಾರರ ಹೆಸರು:D.C, K.S.R.T.C, Mandya Division, Mandya, ಖಾತೆ ಹೆಸರು:ಕರೆಂಟ್ ಅಕೌಂಟ್, ಅಂಕೌಂಟ್ ಸಂಖ್ಯೆ-64005771029 ಮತ್ತು ಐಎಫ್‌ಐಸಿ ಕೋಡ್ ಸಂಖ್ಯೆ- SBIN0040035 ಹಾಗೂ ವಿಭಾಗದ ಜಿಎಸ್‌ಟಿ ಸಂಖ್ಯೆ-29AAACV6497R2Z4. ಹೆಚ್ಚಿನ ವಿವರಗಳಿಗಾಗಿ ಸಹಾಯಕ ಲೆಕ್ಕಾಧಿಕಾರಿ, ಮಂಡ್ಯ ದೂರವಾಣಿ ಸಂ.7760990655ನ್ನು ಸಂಪರ್ಕಿಸಬಹುದಾಗಿದೆ.
14. ಇ-ಪೋರ್ಟಲ್‌ನಲ್ಲಿ ಮಳಿಗೆಗಳ ಸಂಪೂರ್ಣ ವಿವರ, ಟೆಂಡರ್‌ದಾರರು ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು, ಅರ್ಹತಾ ಮಾನದಂಡಗಳು, ಮಳಿಗೆಯ ನಕ್ಷೆ ಹಾಗೂ ಸಂಬಂಧಿಸಿದ ಎಲ್ಲಾ ವಿವರಗಳನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಂಡಿರುವ ಬಗ್ಗೆ ಹಾಗೂ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ಷರತ್ತು ಮತ್ತು ನಿಬಂಧನೆಗಳ ಪ್ರತಿಯಲ್ಲಿ, ಟೆಂಡರ್‌ದಾರರು ಸಹಿ ಮಾಡಿ, ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು.
15. ಮ್ಯಾನ್ಯುಯಲ್ ಟೆಂಡರ್‌ನಲ್ಲಿ ಮಳಿಗೆಗಳ ಸಂಪೂರ್ಣ ವಿವರ, ಟೆಂಡರ್‌ದಾರರು ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು, ಅರ್ಹತಾ ಮಾನದಂಡಗಳು, ಮಳಿಗೆಯ ನಕ್ಷೆ ಹಾಗೂ ಸಂಬಂಧಿಸಿದ ಎಲ್ಲಾ ವಿವರಗಳನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಂಡಿರುವ ಬಗ್ಗೆ ಹಾಗೂ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ಷರತ್ತು ಮತ್ತು ನಿಬಂಧನೆಗಳ ಪ್ರತಿಯಲ್ಲಿ, ಟೆಂಡರ್‌ದಾರರು ಸಹಿ ಮಾಡಿ ಅರ್ಜಿಯೊಂದಿಗೆ ಮುಚ್ಚಿದ ಲಕೋಟೆಯಲ್ಲಿ ಟೆಂಡರ್ ಬಾಕ್ಸ್‌ಗೆ ಹಾಕುವುದು.
16. ಬಿಡ್‌ದಾರರು ಮಳಿಗೆಗಳಿಗೆ ತಮ್ಮ ಬಿಡ್‌ನ್ನು ಸಲ್ಲಿಸುವ ಮೊದಲು ಆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರವೇ ಬಿಡ್ ಮೊತ್ತವನ್ನು ದಾಖಲಿಸುವುದು, ಬಿಡ್‌ದಾರರ ಜವಾಬ್ದಾರಿಯಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಯಾವುದೇ ಕಾರಣಕ್ಕೂ ಮಳಿಗೆಯ ವ್ಯವಹಾರ/ಸ್ಥಳವನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
17. ಮೀಸಲಾತಿ ಬಯಸುವ ಬಿಡ್‌ದಾರರು ಮೀಸಲಾತಿಗೆ ಸಂಬಂಧಿಸಿದ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವುದು.
18. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟ ಮಳಿಗೆಗಳಲ್ಲಿ, ಒಬ್ಬ ಬಿಡ್‌ದಾರರು ಒಂದು ಮಳಿಗೆಯನ್ನು ಮಾತ್ರ ಮೀಸಲಾತಿ ಆಧಾರದ ಮೇಲೆ ಪಡೆಯಲು ಅವಕಾಶವಿದೆ. ನಾಲ್ಕು ರಾಜ್ಯ ಸಾರಿಗೆ ನಿಗಮ / ಸಂಸ್ಥೆ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಮತ್ತು ಇತರೆ ಸರ್ಕಾರಿ ಇಲಾಖೆಗಳಲ್ಲಿ ಯಾವುದೇ ಮಳಿಗೆ / ಜಾಹೀರಾತು ಪರವಾನಗಿಯನ್ನು ಮೀಸಲಾತಿ ಆಧಾರದ ಮೇಲೆ ಪಡೆದಿರುವುದಿಲ್ಲ ಎಂಬ ಬಗ್ಗೆ ಸ್ವಯಂ-ದೃಢೀಕರಣವನ್ನು ಬಿಡ್‌ದಾರರು ಇ-ಟೆಂಡರ್‌ನಲ್ಲಿ ಅಪ್‌ಲೋಡ್ ಮಾಡಲು ಹಾಗೂ ಮ್ಯಾನ್ಯುಯಲ್ ಟೆಂಡರ್ ಆಗಿದ್ದಲ್ಲಿ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸಲು ಸೂಚಿಸಲಾಗಿದೆ. ಈ ನಿಯಮವನ್ನು ಬಿಡ್‌ದಾರರು ಉಲ್ಲಂಘಿಸಿರುವುದು, ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ, ಇ.ಎಂ.ಡಿ. / ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಆಯ್ಕೆ / ಕರಾರನ್ನು ರದ್ದುಗೊಳಿಸಲಾಗುವುದು.
19. ಅಂಧರು ಮತ್ತು ವಿಕಲಚೇತನರಿಗೆ ಮೀಸಲಿಟ್ಟ ಮಳಿಗೆಗಳನ್ನು, ಒಬ್ಬ ಬಿಡ್‌ದಾರರು ಒಂದು ಮಳಿಗೆಯನ್ನು ಮಾತ್ರ ಮೀಸಲಾತಿ ಆಧಾರದ ಮೇಲೆ ಪಡೆಯಲು ಅವಕಾಶವಿದೆ. ನಾಲ್ಕು ರಾಜ್ಯ ಸಾರಿಗೆ ನಿಗಮ / ಸಂಸ್ಥೆ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಮತ್ತು ಇತರೆ ಸರ್ಕಾರಿ ಇಲಾಖೆಗಳಲ್ಲಿ ಯಾವುದೇ ಮಳಿಗೆಗಳ ಪರವಾನಗಿಯನ್ನು ಮೀಸಲಾತಿ ಆಧಾರದ ಮೇಲೆ ಪಡೆದಿರುವುದಿಲ್ಲ ಎಂಬ ಬಗ್ಗೆ ಸ್ವಯಂ-ದೃಢೀಕರಣವನ್ನು ಬಿಡ್‌ದಾರರು ಇ-ಟೆಂಡರ್‌ನಲ್ಲಿ ಅಪ್‌ಲೋಡ್ ಮಾಡಲು ಹಾಗೂ ಮ್ಯಾನ್ಯುಯಲ್ ಟೆಂಡರ್ ಆಗಿದ್ದಲ್ಲಿ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸಲು ಸೂಚಿಸಲಾಗಿದೆ. ಈ ನಿಯಮವನ್ನು ಬಿಡ್‌ದಾರರು ಉಲ್ಲಂಘಿಸಿರುವುದು ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ, ಇ.ಎಂ.ಡಿ / ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಆಯ್ಕೆ / ಕರಾರನ್ನು ರದ್ದುಗೊಳಿಸಲಾಗುವುದು.
20. ವಿಕಲಚೇತನ ಅರ್ಜಿದಾರರು ಕನಿಷ್ಟ ಶೇ.40/- ರಷ್ಟು ಅಂಗವಿಕಲತೆಯನ್ನು ಹೊಂದಿರಬೇಕು. ಸಂಪೂರ್ಣ ಅಂಧ, ಕಿವುಡು ಹಾಗೂ ಮೂಕ ಅಭ್ಯರ್ಥಿಗಳು ಸಹ ಅರ್ಜಿಸಲ್ಲಿಸಬಹುದಾಗಿದೆ. ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ಭಾವಚಿತ್ರ ಇರುವ ಅಂಗವಿಕಲತೆಯ ಚಾಲ್ತಿಯಿರುವ ಪುಸ್ತಕ/ಪ್ರಮಾಣ ಪತ್ರವನ್ನು ಮತ್ತು ಅಂಗವಿಕಲತೆಯ ಭಾವಚಿತ್ರವನ್ನು ಅರ್ಜಿಯೊಂದಿಗೆ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು ಹಾಗೂ ಆಯ್ಕೆಯಾದ ಅಭ್ಯರ್ಥಿಯು ತಾವು ಅಪ್ ಲೋಡ್ ಮಾಡಿರುವ ಮೂಲ ಪ್ರತಿಗಳನ್ನು ಸಲ್ಲಿಸುವುದು.
21. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ಇರಿಸುವ ವಾಣಿಜ್ಯ ಮಳಿಗೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಆಯಾ ತಾಲ್ಲೂಕು ತಹಶೀಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರ ಧೃಢೀಕೃತ ಪ್ರತಿಯನ್ನು ಅರ್ಜಿಯೊಂದಿಗೆ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು ಹಾಗೂ ಆಯ್ಕೆಯಾದ ಅಭ್ಯರ್ಥಿಯು ತಾವು ಅಪ್ ಲೋಡ್ ಮಾಡಿರುವ ಮೂಲ ಪ್ರತಿಗಳನ್ನು ಸಲ್ಲಿಸುವುದು.

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ

22. ಬಿಡ್‌ದಾರರು ಒಂದು ಮಳಿಗೆಗೆ ಒಂದಕ್ಕಿಂತ ಹೆಚ್ಚಿನ ಬಿಡ್‌ಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
23. ಆಯ್ಕೆಗೊಂಡ ಪರವಾನಗಿದಾರರು ಮಳಿಗೆಯನ್ನು ಸ್ವತ: ನಡೆಸುವುದು, ಪರಭಾರೆ ಮಾಡುವಂತಿಲ್ಲ.
24. ಒಂದು ವೇಳೆ ಬಿಡ್‌ದಾರರು ಇ-ಪೋರ್ಟಲ್‌ನ ಆರ್ಥಿಕ ಬಿಡ್‌ನಲ್ಲಿ ಮತ್ತು ನಿಗದಿತ ನಮೂನೆಯಲ್ಲಿ ನಮೂದಿಸಿದ ಬಿಡ್ ಮೊತ್ತ ಬೇರೆ ಬೇರೆ ಆಗಿದ್ದಲ್ಲಿ, ಇ-ಪೋರ್ಟಲ್‌ನ ಆರ್ಥಿಕ ಬಿಡ್ ಮೊತ್ತವನ್ನು ಪರಿಗಣಿಸಲಾಗುವುದು.
25. ಬಿಡ್‌ದಾರರ ಷರತ್ತಿನ ಟೆಂಡರ್‌ಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಯಾವುದೇ ಷರತ್ತುಗಳು ಇಲ್ಲದೆ ಟೆಂಡರ್ ನಿಯಮಗಳನ್ನು ಪಾಲಿಸಿರುವ ಅರ್ಹ ಟೆಂಡರ್‌ಗಳನ್ನು ಮಾತ್ರ ಅಂಗೀಕರಿಸಲಾಗುವುದು.
26. ಇ-ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್‌ದಾರರು ಅಪ್‌ಲೋಡ್ ಮಾಡಿರುವ ಎಲ್ಲಾ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಮೇಲೆ ತಿಳಿಸಿರುವ ದಿನಾಂಕ/ಸಮಯದೊಳಗೆ ಸಲ್ಲಿಸಬೇಕು ಹಾಗೂ ಮ್ಯಾನ್ಯುಯಲ್ ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್‌ದಾರರು ಎಲ್ಲಾ ಅಗತ್ಯ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಮೇಲೆ ತಿಳಿಸಿರುವ ದಿನಾಂಕ/ಸಮಯದೊಳಗೆ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸಬೇಕು.
27. ಬಿಡ್‌ದಾರರು ಕೆಳಕಂಡ ಅಗತ್ಯ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಪ್‌ಲೋಡ್ ಮಾಡಬೇಕಿರುತ್ತದೆ ಹಾಗೂ ಒಂದು ಜೆರಾಕ್ಸ್ ಪ್ರತಿಯನ್ನು ಮೂಲ ಅರ್ಜಿ ಡಿ.ಡಿ ಮತ್ತು ಇಎಂಡಿ ಡಿ.ಡಿ.ಯೊಂದಿಗೆ ಟೆಂಡರ್ ಬಾಕ್ಸ್‌ನಲ್ಲಿ ಅರ್ಜಿಯೊಂದಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬೇಕಿರುತ್ತದೆ ಹಾಗೂ ಮ್ಯಾನ್ಯುಯಲ್ ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್‌ದಾರರು ಈ ಕೆಳಕಂಡ ಅಗತ್ಯ ದಾಖಲೆಗಳನ್ನು ಟೆಂಡರ್ ಬಾಕ್ಸ್‌ನಲ್ಲಿ ಅರ್ಜಿ ಹಾಗೂ ಮೂಲ ಅರ್ಜಿ ಡಿ.ಡಿ ಮತ್ತು ಇಎಂಡಿ ಡಿ.ಡಿ.ಯೊಂದಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬೇಕಿರುತ್ತದೆ.

| ರೂ.5.00 ಲಕ್ಷಗಳಿಗಿಂತ ಕಡಿಮೆ ಮಾಸಿಕ ಪರವಾನಗಿ ಶುಲ್ಕವಿರುವ ವಾಣಿಜ್ಯ ಮಳಿಗೆಗಳಿಗೆ |
|---|
| ಅ) ವಿಳಾಸ ದೃಢೀಕರಣ ಪತ್ರ (Voter ID, Aadhaar Card, Bank Passbook, Passport, etc.)<br>ಆ) ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದ್ದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯು ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು. ಪಾಲುದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು / ಪಾಲುದಾರರ ಪೂರ್ಣ ವಿಳಾಸದ ಮಾಹಿತಿಯನ್ನು ಸಲ್ಲಿಸಬೇಕು.<br>ಇ) ಬಿಡ್‌ದಾರರು ಕಂಪನಿ / ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್ ಮಾಡಿದ್ದಲ್ಲಿ, ಕಂಪನಿಯು ಇಂಡಿಯನ್ ಕಂಪನೀಸ್ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿಯನ್ನು ಸಲ್ಲಿಸಬೇಕು.<br>ಈ) ಬಿಡ್‌ದಾರರು ಕ.ರಾ.ರ.ಸಾ.ನಿಗಮ ಮತ್ತು ಇತರೆ ನಿಗಮಗಳಲ್ಲಿ Defaulter ಆಗದೆ ಇರುವ ಬಗ್ಗೆ ಹಾಗೂ ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ-ದೃಢೀಕರಣ ಪತ್ರ ಸಲ್ಲಿಸುವುದು.(ಅನುಭಂದ-1 (Annexure-1)ನ್ನು ಭರ್ತಿಗೊಳಿಸಿ.)<br>ಉ) ಪಾನ್ ಕಾರ್ಡ್<br>ಊ) ಷರತ್ತು ಮತ್ತು ನಿಬಂಧನೆಗಳನ್ನು ಓದಿ ಸಹಿ ಮಾಡಿದ ಪ್ರತಿಗಳು.<br>ಇ) ಅರ್ಜಿ ಶುಲ್ಕದ ಡಿ.ಡಿ.<br>ಈ) ಇ.ಎಂ.ಡಿ ಮೊತ್ತದ ಡಿ.ಡಿ<br>ಉ) ತಹಶಿಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣಪತ್ರ (ಮೀಸಲಾತಿ ಅನ್ವಯವಿರುವ ಮಳಿಗೆಗಳಿಗೆ ಮಾತ್ರ)<br>ಊ) ಅಂಗವಿಕಲತೆ ಬಗ್ಗೆ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ಭಾವಚಿತ್ರ ಇರುವ ಪುಸ್ತಕ/ಪ್ರಮಾಣ ಪತ್ರವನ್ನು (ಮೀಸಲಾತಿ ಅನ್ವಯವಿರುವ ಮಳಿಗೆಗಳಿಗೆ ಮಾತ್ರ)<br>ಋ)ಮೀಸಲಾತಿ ಆಧಾರದ ಮೇಲೆ ಇತರೆ ನಿಗಮ/ಇಲಾಖೆಗಳಲ್ಲಿ ಮಳಿಗೆ ಪಡೆದಿರುವುದಿಲ್ಲದಿರುವ ಬಗ್ಗೆ ದೃಢಿಕರಣ ಪತ್ರ.(Annexure-2) (ಮೀಸಲಾತಿ ಅನ್ವಯವಿರುವ ಮಳಿಗೆಗಳಿಗೆ ಮಾತ್ರ) |

28. ಇ-ಟೆಂಡರ್ / ಮ್ಯಾನ್ಯುಯಲ್ ಟೆಂಡರ್‌ನಲ್ಲಿ ನಿಗದಿತ ಮಾಸಿಕ ಪರವಾನಗಿ ಶುಲ್ಕಕ್ಕಿಂತ ಹೆಚ್ಚಿನ ಮೊತ್ತವನ್ನು H1 ಮತ್ತು H2 ಬಿಡ್‌ದಾರರು ನಮೂದಿಸಿದ ಸಂದರ್ಭದಲ್ಲಿ, H1 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ಹಿಂದೆ ಸರಿದಲ್ಲಿ / ವಿಫಲರಾದಲ್ಲಿ, ಸದರಿಯವರ ಇ.ಎಂ.ಡಿ.ಯನ್ನು ಮುಟ್ಟುಗೋಲು ಹಾಕಿಕೊಂಡ ನಂತರ H2 ಬಿಡ್‌ದಾರರನ್ನು ಪರವಾನಗಿದಾರರಾಗಿ ಆಯ್ಕೆ ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿದೆ. H2 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ಹಿಂದೆ ಸರಿದಲ್ಲಿ/ವಿಫಲರಾಅದಲ್ಲಿ, ಸದರಿಯವರ ಇ.ಎಂ.ಡಿ.ಯನ್ನು ಮುಟ್ಟುಗೋಲು ಹಾಕಿಕೊಂಡು ನಂತರ ನಿಗದಿತ ಮಾಸಿಕ ಪರವಾನಗಿ ಶುಲ್ಕಕ್ಕಿಂತ ಹೆಚ್ಚಿನ ಮೊತ್ತ ಬಿಡ್ ಮಾಡಿದ H3 ಬಿಡ್‌ದಾರರನ್ನು ಸಹ ಪರವಾನಗಿದಾರರಾಗಿ ಆಯ್ಕೆ ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿದೆ.
29. ತೆರೆದ ಸ್ಥಳಕ್ಕೆ ಮೂರು(03) ವರ್ಷ ಮತ್ತು ಸ್ಥಿರ ಮಳಿಗೆಗಳಿಗೆ ಐದು(05) ವರ್ಷ ಅವಧಿಗೆ ಆಯ್ಕೆಯಾದ ಅರ್ಜಿದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗುವುದು.
30. ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ ದಿನಾಂಕದಿಂದ 15 ದಿನಗಳೊಳಗಾಗಿ ನಿಗದಿತ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಿ, ಸೂಕ್ತ ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಬೇಕು. ವಾಣಿಜ್ಯ ಮಳಿಗೆಗಳಿಗೆ ಆಯ್ಕೆಯಾದ ಪರವಾನಗಿದಾರರು ಕರ್ನಾಟಕ ಸ್ಟಾಂಪ್ ಆಕ್ಟ್-2010 ರನ್ವಯ ಒಂದು ವರ್ಷ ಮೀರುವ ಮತ್ತು 10 ವರ್ಷ ಮೀರದೆ ಇರುವ ಪರವಾನಗಿ ಅವಧಿಗೆ, ಒಟ್ಟು ಪರವಾನಗಿ ಶುಲ್ಕದ (ಪ್ರತಿ ವರ್ಷ ಶೇ.10 ರಷ್ಟು ಹೆಚ್ಚಳ ಸೇರಿದಂತೆ) ಸರಾಸರಿ ಮೊತ್ತದ ಮೇಲೆ ಶೇ.1ರಷ್ಟು ಹಾಗೂ ಭದ್ರತಾ ಠೇವಣಿ ಮೊತ್ತದ ಮೇಲೆ ಶೇ.1ರಷ್ಟು ಸ್ಟಾಂಪ್ ಶುಲ್ಕವನ್ನು ಭರಿಸಬೇಕಾಗುತ್ತದೆ.

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ

31. ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ 15 ದಿನಗಳೊಳಗೆ ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
32. ಪರವಾನಗಿದಾರರು ಪ್ರತಿ ಮಾಹೆ 07 ನೇ ತಾರೀಖಿನೊಳಗಾಗಿ ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಶುಲ್ಕವನ್ನು, ಪ್ರಸ್ತುತ ಶೇ.18, ದ್ವಿ-ಚಕ್ರ ವಾಹನ ನಿಲ್ದಾಣಕ್ಕೆ ಪರವಾನಗಿ ಶುಲ್ಕದ ಮೇಲೆ ಶೇ.2ರಷ್ಟು ಟಿಡಿಎಸ್/ಟಿಸಿಎಸ್ ಪಾವತಿಸಬೇಕಿರುತ್ತದೆ. ಸದರಿ ಶುಲ್ಕಗಳನ್ನು ಮುಂಗಡವಾಗಿ ನಿಗಮಕ್ಕೆ ಪಾವತಿಸಬೇಕು. ಕಾಲ ಕಾಲಕ್ಕೆ ಸರ್ಕಾರ ವಿಧಿಸುವ ಷರುತ್ತುಗಳಿಗೆ ಬದ್ದರಿರುವುದು. ಒಂದು ವೇಳೆ ಇನ್‌ವಾಯ್ಸ್ ಮೊತ್ತ ಪಾವತಿಸಲು ಪರವಾನಗಿದಾರರು ತಡಮಾಡಿದಲ್ಲಿ, ಬಾಕಿ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಮೇಲೂ ವಾರ್ಷಿಕ ಶೇ.18 ರಷ್ಟು ಬಡ್ಡಿಯನ್ನು ಕನಿಷ್ಠ ರೂ.100/- ರಂತೆ, ವಿಳಂಬದ ದಿನಗಳ ಲೆಕ್ಕದಲ್ಲಿ ವಿಧಿಸಲಾಗುವುದು.
33. ಪರವಾನಗಿದಾರರು ತಮ್ಮ ಮಳಿಗೆಯಲ್ಲಿ ಬೆಂಕಿ ನಂದಿಸುವ ಉಪಕರಣಗಳನ್ನು ಇಟ್ಟುಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿಕೊಳ್ಳಬೇಕು.
34. ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾ ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್/ನಿಬಂಧನೆಗಳಿಗೆ ಪರವಾನಗಿದಾರರು ಬದ್ದರಾಗಿರಬೇಕು.
35. ಪರವಾನಗಿದಾರರಿಂದ GST ನೊಂದಣಿ ಮತ್ತು ಇದಕ್ಕೆ ಪೂರಕವಾದ ದಾಖಲೆಗಳನ್ನು ಸಲ್ಲಿಸುವುದು.
36. ಮಾಸಿಕ ಪರವಾನಗಿಶುಲ್ಕವು ಪ್ರತಿ ವರ್ಷ ಶೇ.10 ರಷ್ಟು ಹೆಚ್ಚಳ ಮಾಡಲಾಗುತ್ತದೆ. ಇದಕ್ಕನುಗುಣವಾಗಿ ಸರಕು & ಸೇವಾ ತೆರಿಗೆಯು ಹೆಚ್ಚಳವಾಗುತ್ತದೆ.
37. ಪ್ರತಿ ಮಾಹೆಯ ವಿದ್ಯುಚ್ಛಕ್ತಿ ಹಾಗೂ ನೀರಿನ ಬಿಲ್ಲುಗಳನ್ನು ನಿಗದಿತ ಸಮಯದಲ್ಲಿ ಪಾವತಿಸಬೇಕು.
38. ಮಾಸಿಕ ಪರವಾನಗಿ ಶುಲ್ಕ, ಸರಕು & ಸೇವಾ ತೆರಿಗೆ ಮತ್ತು ಇತರೆ ಶುಲ್ಕಗಳನ್ನು ಸಂಬಂಧಿಸಿದ ವಿಭಾಗ/ಘಟಕದ ಲೆಕ್ಕ ಪತ್ರ ಶಾಖೆಯಲ್ಲಿ, DD (ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕುಗಳ)/RTGS / NEFT ಮೂಲಕ ಪಾವತಿಸುವುದು. ಸಂಬಂಧಪಟ್ಟ ವಿಭಾಗೀಯ ಕಛೇರಿ / ಸಂಬಂಧಪಟ್ಟ ಘಟಕದ ಅಕೌಂಟ್ ಸಂಖ್ಯೆ / ಐಎಸ್‌ಎಫ್‌ಸಿ ಕೋಡ್ ಅನ್ನು ಪರವಾನಗಿದಾರರಿಗೆ ಪಡೆದುಕೊಂಡು, ಪರವಾನಗಿದಾರರು RTGS / NEFT ಮೂಲಕ ಪಾವತಿ ಮಾಡುವಾಗ ಬಸ್ ನಿಲ್ದಾಣ, ಮಳಿಗೆ ಸಂಖ್ಯೆ, ಪರವಾನಗಿದಾರರ ಹೆಸರು ಮತ್ತು ಮಾಹೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ನಗದು ಕೌಂಟರ್‌ನಲ್ಲಿ, ಭಾರತೀಯ ರಿಜರ್ವ್ ಬ್ಯಾಂಕ್ ನಿಗದಿಪಡಿಸಿದ ಮಿತಿಯಲ್ಲಿ ನಗದು ರೂಪದಲ್ಲಿ ಪಾವತಿಸುವುದು.
39. ನಿಗಮದ ಕೊಳವೆ ಬಾವಿಗಳಿಂದ ನೀರಿನ ಸೌಲಭ್ಯವನ್ನು ಕಲ್ಪಿಸಿರುವಂತಹ ಮಳಿಗೆಗಳ ಪರವಾನಗಿದಾರರು ಮಾಸಿಕ ಪರವಾನಗಿ ಶುಲ್ಕದ ಶೇ.2 ರಷ್ಟು ಅಥವಾ ಕೊಳವೆ ಬಾವಿಯ ವಿದ್ಯುತ್ ಬಿಲ್ಲಿನ ಶೇ.50 ರಷ್ಟು, ಇದರಲ್ಲಿ ಯಾವುದು ಹೆಚ್ಚಿನದು, ಆ ಮೊತ್ತವನ್ನು ಪಾವತಿಸಬೇಕು.
40. ಒಂದು ವೇಳೆ ಮಳಿಗೆಗಳಿಗೆ ಜಲಮಂಡಳಿ / ಸಂಬಂಧಿಸಿದ ಇಲಾಖೆಗಳಿಂದ ಪ್ರತ್ಯೇಕವಾಗಿ ನೀರಿನ ಸಂಪರ್ಕವಿದ್ದಲ್ಲಿ, ಅಂತಹ ಮಳಿಗೆಯ ಪರವಾನಗಿದಾರರು ಅನ್ವಯಿಸುವ ನೀರಿನ ಶುಲ್ಕವನ್ನು ಸಂಬಂಧಿಸಿದ ಇಲಾಖೆಗೆ ಪಾವತಿಸಬೇಕು.
41. ಒಂದು ವೇಳೆ ನಿಗಮದ ವತಿಯಿಂದ ನೀರಿನ ಸರಬರಾಜು ಮಾಡಲು ಸಾಧ್ಯವಾಗದಿದ್ದಲ್ಲಿ, ಪರವಾನಗಿದಾರರು ತಮ್ಮ ಸ್ವಂತ ಖರ್ಚಿನಲ್ಲಿ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಿರುತ್ತದೆ.
42. ಪರವಾನಗಿದಾರರು ಕೊಳವೆ ಬಾವಿ (Borewell) ಕೊರೆಸಲು ಅನುಮತಿ ಕೋರಿದಲ್ಲಿ, ಸ್ಥಳೀಯ ಸಂಸ್ಥೆಗಳ ನಿಯಮಾವಳಿಗಳು, ವಾಣಿಜ್ಯ ಸ್ಥಳ, ಬಸ್ ನಿಲ್ದಾಣದಲ್ಲಿ ಹಾಲಿ ಇರುವಂತಹ ಬೋರ್‌ವೆಲ್‌ಗಳ ಆಧಾರದಲ್ಲಿ ನಿರ್ಧರಿಸಲಾಗುವುದು. ನಿಗಮದ ತೀರ್ಮಾನಕ್ಕೆ ಪರವಾನಗಿದಾರರು ಬದ್ಧರಾಗಿರಬೇಕು.
43. ಪರವಾನಗಿದಾರರು ಟೆಂಡರ್ / ಕರಾರು ಒಪ್ಪಂದದಲ್ಲಿ ನಮೂದಿಸಿದ ಸ್ಥಳದ ವಿಸ್ತೀರ್ಣಕ್ಕಿಂತ ಆ ವಾಣಿಜ್ಯ ಮಳಿಗೆಗೆ ಹೊಂದಿಕೊಂಡಂತೆ ಇರುವ ಹೆಚ್ಚುವರಿ ಸ್ಥಳವನ್ನು ಬಳಸಲು ಉದ್ದೇಶಿಸಿ, ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮನವಿ ನೀಡಿದಲ್ಲಿ, ಸಣ್ಣ ವಿಸ್ತೀರ್ಣದ ಮಳಿಗೆಗಳಿಗೆ, ಅಂದರೆ 200 ಚದರಡಿ ವಿಸ್ತೀರ್ಣದ ಒಳಗಿನ ಮಳಿಗೆಗಳನ್ನೂ ಒಳಗೊಂಡಂತೆ ಸ್ಥಳಾವಕಾಶ ಲಭ್ಯತೆಗೆ ಅನುಗುಣವಾಗಿ ಟೆಂಡರ್/ಕರಾರು ಒಪ್ಪಂದದಲ್ಲಿ ನಮೂದಿಸಿದ ಟೆಂಡರ್ / ಕರಾರು ಒಪ್ಪಂದದಲ್ಲಿ ನಮೂದಿಸಿದ ವಿಸ್ತೀರ್ಣದ ಶೇ.20 ರಷ್ಟು ವಿಸ್ತೀರ್ಣದ ಸ್ಥಳವನ್ನು, ಪ್ರಸ್ತುತ ಪಾವತಿಸುತ್ತಿರುವ ಪ್ರತಿ ಚ.ಅಡಿ ಪರವಾನಗಿ ಶುಲ್ಕದ 1.5 ಪಟ್ಟು ಮೊತ್ತವನ್ನು ಮಾಸಿಕ ಪರವಾನಗಿ ಶುಲ್ಕವನ್ನಾಗಿ ನಿಗದಿಪಡಿಸಿ ಒದಗಿಸುವುದು. ಹೆಚ್ಚುವರಿ ಸ್ಥಳಾವಕಾಶ ಬಳಸಿಕೊಂಡು ಪ್ರತ್ಯೇಕ ಮಳಿಗೆ, ಕೌಂಟರ್, ವ್ಯವಹಾರ ಮಾಡಲು ಅವಕಾಶವಿರುವುದಿಲ್ಲ.
44. ಪರವಾನಗಿದಾರರು ಅನಧಿಕೃತವಾಗಿ ಬಳಸಿದ ಹೆಚ್ಚುವರಿ ಸ್ಥಳಾವಕಾಶವನ್ನು ನೋಟಿಸ್ ನೀಡಿದ ಕೂಡಲೇ ತೆರವುಗೊಳಿಸಬೇಕು. ಇದಲ್ಲದೆ, ಪರವಾನಗಿದಾರರಿಗೆ ಕೆಳಕಂಡಂತೆ ದಂಡ ವಿಧಿಸಲಾಗುತ್ತದೆ. ಹಾಗೂ ಕರಾರನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳುವುದು.

| | | |
|---|---|---|
| ಮೊದಲ ಬಾರಿಗೆ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 3 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸುವುದು. | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು |
| ಎರಡನೇ ಬಾರಿಗೆ ಹಾಗೂ ಪುನರಾವರ್ತನೆಗೊಂಡಲ್ಲಿ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 5 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸುವುದು. ಇದಲ್ಲದೆ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು, ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ. | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು. |

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ

45. ಉಪಹಾರ ಗೃಹ, ಚಾಟ್ ಸೆಂಟರ್, ಮಿಲ್ಕ್ ಪಾರ್ಲರ್, ಹಣ್ಣಿನ ಮಳಿಗೆ, ಲಗೇಜ್ / ಕ್ಲೋಕ್ ರೂಂ, ಕಛೇರಿ ಸ್ಥಳಾವಕಾಶ, ದ್ವಿಚಕ್ರ / ಕಾರು ಪಾರ್ಕಿಂಗ್, ದೂರವಾಣಿ / ಕಾಯಿನ್ ಬೂತ್, ಎ.ಟಿ.ಎಂ. ಕೌಂಟರ್, ಲಾಡ್ಜಿಂಗ್ ಮತ್ತು ಡಾರ್ಮಿಟರಿ, ನಾಣ್ಯ ಚಾಲಿತ ಮಾನವ ತೂಕದ ಯಂತ್ರ, ಔಷಧಿ ಮಳಿಗೆ, ಸರ್ಕಾರಿ ಮತ್ತು ಅರೆ-ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮಳಿಗೆಗಳನ್ನು ಹೊರತುಪಡಿಸಿ, ಇನ್ನಿತರೆ ಮಳಿಗೆಗಳಿಗೆ "ಜನರಲ್ ಸ್ಟಾಲ್" ಎಂದು ನಿಗಧಿಪಡಿಸಿದೆ.
46. ಪರವಾನಗಿ ಪಡೆದ ಮಳಿಗೆಗಳಲ್ಲಿ ಟೆಂಡರ್‌ನಲ್ಲಿ ನಿಗದಿಪಡಿಸಿದ ವ್ಯವಹಾರವನ್ನು ಹೊರತುಪಡಿಸಿ ಇತರೆ ವ್ಯವಹಾರವನ್ನು ನಡೆಸಲು ಅವಕಾಶವಿರುವುದಿಲ್ಲ.
47. ಜನರಲ್ ಸ್ಟಾಲ್‌ಗಳಿಗೆ ಆಯ್ಕೆಯಾದ ಪರವಾನಗಿದಾರರು, ಈ ಕೆಳಗಿನ ಪಟ್ಟಿಯಲ್ಲಿ ನಮೂದಿಸಿದ ವಸ್ತು / ಪದಾರ್ಥಗಳನ್ನು ಮಾರಾಟ ಮಾಡಬೇಕಿರುತ್ತದೆ. ಮಾರಾಟ ಮಾಡಲು ನಿಷೇಧಿಸಿದ ವಸ್ತು / ಪದಾರ್ಥಗಳನ್ನು ಮಾರಾಟ ಮಾಡುವಂತಿಲ್ಲ. ಸದರಿ ಪಟ್ಟಿಯ ಹೊರತಾಗಿ ಇರುವ ವಸ್ತುಗಳನ್ನು ಮಾರಾಟ ಮಾಡಬೇಕಿದ್ದಲ್ಲಿ, ಪರವಾನಗಿದಾರರು ಕರಾರಿಗೂ ಮುಂಚಿತವಾಗಿ ನಿಗಮದಿಂದ ಪೂರ್ವಾನುಮತಿ ಪಡೆಯಬೇಕಿರುತ್ತದೆ. ವಿಭಾಗದ ಅಧಿಕಾರಿಗಳು ಅನುಮತಿ ನೀಡುವ ಮುನ್ನ, ಸದರಿ ವಸ್ತುಗಳ ಮಾರಾಟದಿಂದ ಇತರೆ ಮಳಿಗೆಗಳ ವ್ಯವಹಾರಕ್ಕೆ ನಷ್ಟ ಆಗುವುದಿಲ್ಲ, ಎಂಬುದನ್ನು ದೃಢೀಕರಿಸಿಕೊಳ್ಳಬೇಕು.

| ಜನರಲ್ ಮಳಿಗೆಯಲ್ಲಿ ಮಾರಾಟ ಮಾಡಬಹುದಾದ ವಸ್ತು / ಪದಾರ್ಥಗಳು | ಜನರಲ್ ಮಳಿಗೆಯಲ್ಲಿ ಮಾರಾಟ ಮಾಡಲು ನಿಷೇಧಿಸಿರುವ ವಸ್ತು / ಪದಾರ್ಥಗಳು |
|---|---|
| ಪುಸ್ತಕ/ದಿನಪತ್ರಿಕೆ/ನಿಯತಕಾಲಿಕೆಗಳು ಮತ್ತು ಸ್ಟೇಷನರಿ ವಸ್ತುಗಳು, ಮಾರ್ಜಕ/ಸಾಬೂನುಗಳು/ಹಣ್ಣು/ಹೂಗಳು, ಜೆರಾಕ್ಸ್, ಪ್ಯಾಕ್ ಆಗಿರುವ ಬಿಸ್ಕೆಟ್ಸ್/ಜ್ಯೂಸ್, ಬೇಕರಿ ತಿನಿಸುಗಳು, ನೀರಿನ ಬಾಟಲ್, ಮೊಬೈಲ್ ಕರೆನ್ಸಿ, ಸೌಂದರ್ಯವರ್ಧಕಗಳು, ಅಲಂಕಾರಿಕ ವಸ್ತುಗಳು, ಕೊಡುಗೆ ನೀಡುವ ವಸ್ತುಗಳು, ಫ್ಯಾನ್ಸಿ ಸ್ಟೋರ್‌ನಲ್ಲಿ ಮಾರಾಟ ಮಾಡುವ ವಸ್ತುಗಳು,<br>ಈ ಮಳಿಗೆಗಳಲ್ಲಿ ಗ್ಯಾಸ್ / ಸ್ಟೌವ್ ಬಳಕೆಗೆ ಅವಕಾಶವಿಲ್ಲ. | ಬೇಯಿಸಿದ ಪದಾರ್ಥಗಳಾದ ಕಾಫಿ, ಟೀ, ಉಪಹಾರ, ಊಟ, ಮಾಂಸ, ಹಾಲು ಇತ್ಯಾದಿಗಳು, ಔಷಧಿಗಳು, ದೂರವಾಣಿ ಬೂತ್, ನಾಣ್ಯ ಚಾಲಿತ ಮಾನವ ತೂಕದ ಯಂತ್ರ, ಕಾನೂನು ಬಾಹಿರವಾಗಿರುವ ಪಟಾಕಿ, ಗನ್ನುಗಳು, ಸಿಡಿಮದ್ದುಗಳು, ತಂಬಾಕುಯುಕ್ತ ಪದಾರ್ಥಗಳು, ಮದ್ಯದ ಮಾರಾಟ, ಸೀಮೆಎಣ್ಣೆ, ಡೀಸೆಲ್, ಪೆಟ್ರೋಲ್ & ಗ್ಯಾಸ್, ಗ್ಯಾಸ್ ಸಿಲಿಂಡರ್, ಟ್ರಾವೆಲ್ / ಟ್ರಾನ್ಸ್‌ಪೋರ್ಟ್ ಏಜೆನ್ಸಿ, ಟಿಕೇಟ್ ಬುಕಿಂಗ್, ಇತ್ಯಾದಿ ಕಾನೂನು ಮತ್ತು ನಿಗಮದ ವತಿಯಿಂದ ನಿಷೇಧಿಸಲ್ಪಟ್ಟ ಹಾಗೂ ಮುಂದೆ ನಿಷೇಧಿಸಲ್ಪಡುವ ವಸ್ತುಗಳು. |

48. ವಾಣಿಜ್ಯ ಮಳಿಗೆ/ಉಪಹಾರ ಗೃಹ/ಲಾಡ್ಜ್ ಮತ್ತು ಇತರೆ ಎಲ್ಲಾ ಮಳಿಗೆಗಳಲ್ಲಿ ಪರವಾನಗಿದಾರರು ಮಾರಾಟ ಮಾಡುವ ವಸ್ತುಗಳನ್ನು, ಅವುಗಳ ಮೇಲೆ ನಮೂದಿಸಲಾದ ಗರಿಷ್ಠ ಮೊತ್ತಕ್ಕೆ / MRP(Maximum Retail Price) ಮೀರದಂತೆ ಮಾರಾಟ ಮಾಡಬೇಕು. ವಸ್ತುಗಳನ್ನು ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲ ಪ್ರಕರಣಕ್ಕೆ ರೂ.500/-, 2ನೇ ಪ್ರಕರಣಕ್ಕೆ ರೂ.1,000/- ಮತ್ತು 3ನೇ ಪ್ರಕರಣಕ್ಕೆ ರೂ.2,000/- ದಂಡ ವಿಧಿಸುವುದು. ಇದು ಪುನರಾವರ್ತನೆಗೊಂಡಲ್ಲಿ, ರೂ.2,000/- ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
49. ವಾಣಿಜ್ಯ ಮಳಿಗೆ/ಉಪಹಾರ ಗೃಹ/ಲಾಡ್ಜ್ ಮತ್ತು ಇತರೆ ಎಲ್ಲಾ ಮಳಿಗೆಗಳಲ್ಲಿ ಪರವಾನಗಿದಾರರು ನಿಗಧಿತ ವಸ್ತುಗಳನ್ನು ಹೊರತುಪಡಿಸಿ, ಇತರೆ ವಸ್ತುಗಳನ್ನು ಮಾರಾಟ ಮಾಡುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲ ಪ್ರಕರಣಕ್ಕೆ ರೂ.1,000/-, 2ನೇ ಪ್ರಕರಣಕ್ಕೆ ರೂ.2,000/- ಮತ್ತು 3ನೇ ಪ್ರಕರಣಕ್ಕೆ ಅಥವಾ ತದನಂತರ ರೂ.5,000/- ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
50. ಜಿಲ್ಲಾಕೇಂದ್ರ ಬಸ್ ನಿಲ್ದಾಣದಲ್ಲಿನ ಪಾರ್ಕಿಂಗ್ ದರಗಳು:

| 48. ಸಮಯ | 0-2 | 2-4 | 4-8 | 8-12 | 12-24 | 24 ಗಂಟೆ ಮೇಲ್ಪಟ್ಟು |
|---|---|---|---|---|---|---|
| ದರ(ರೂ.ಗಳಲ್ಲಿ) | 5/- | 10/- | 15/- | 20/- | 25/- | ಪ್ರತಿ ದಿನಕ್ಕೆ ರೂ.25/- |

ತಾಲ್ಲೂಕು / ಇತರೆ ಬಸ್ ನಿಲ್ದಾಣಗಳ ಪಾರ್ಕಿಂಗ್ ದರಗಳು:

| ಸಮಯ | 0-2 | 2-4 | 4-8 | 8-12 | 12-24 | 24 ಗಂಟೆ ಮೇಲ್ಪಟ್ಟು |
|---|---|---|---|---|---|---|
| ದರ(ರೂ.ಗಳಲ್ಲಿ) | 5/- | 5/- | 10/- | 15/- | 20/- | ಪ್ರತಿ ದಿನಕ್ಕೆ ರೂ.20/- |

51. ಜಿಲ್ಲಾ ಕೇಂದ್ರದ ಬಸ್ ನಿಲ್ದಾಣಗಳಲ್ಲಿ ವಾಹನಗಳು ಒಳಬರುವ ಮತ್ತು ಹೊರಹೋಗುವ ಸಮಯವನ್ನು ದಾಖಲಿಸುವ ಪಾರ್ಕಿಂಗ್ ಮೀಟರ್‌ನ್ನು ಅಳವಡಿಸಿಕೊಳ್ಳುವುದು.
52. ಒಬ್ಬ ಗ್ರಾಹಕರು ಮೂರು (03) ದಿನಗಳ ಮೇಲ್ಪಟ್ಟು ನಿರಂತರವಾಗಿ ವಾಹನವನ್ನು ಪಾರ್ಕಿಂಗ್ ಮಾಡಲು ಅವಕಾಶವಿರುವುದಿಲ್ಲ.
53. ಸೈಕಲ್ / ಸ್ಕೂಟರ್ ನಿಲ್ದಾಣ (ದ್ವಿಚಕ್ರ ವಾಹನ ನಿಲ್ದಾಣ) ಮತ್ತು ಕಾರು ನಿಲ್ದಾಣದಲ್ಲಿ ವಾಹನಗಳ ನಿಲುಗಡೆಗೆ ನಿಗದಿಪಡಿಸಿದ ದರಗಳನ್ನು ಮಾತ್ರ ಪಡೆದುಕೊಳ್ಳುವುದು. ಒಂದು ವೇಳೆ ನಿಗದಿತ ದರಕ್ಕಿಂತ ಹೆಚ್ಚಿನ ದರಗಳನ್ನು ಎರಡನೇ ಪಾರ್ಟಿಯು ಪಡೆಯುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ ಮೊದಲ ಐದು ಪ್ರಕರಣಗಳಿಗೆ ತಲಾ ರೂ.500/-ಗಳನ್ನು, ನಂತರದ ಐದು ಪ್ರಕರಣಗಳಿಗೆ ತಲಾ ರೂ.1000/-ಗಳನ್ನು ದಂಡ ವಿಧಿಸಲಾಗುವುದು(ಪ್ರತ್ಯೇಕವಾಗಿ ಜಿಎಸ್‌ಟಿ ಅನ್ವಯವಾಗುತ್ತದೆ). ತದನಂತರದ ಪ್ರಕರಣಗಳು ದಾಖಲಾದಲ್ಲಿ ಕರಾರನ್ನು ರದ್ದುಪಡಿಸಲಾಗುವುದು ಹಾಗೂ ಕಪ್ಪುಪಟ್ಟಿಗೆ ಸೇರಿಸಲಾಗುವುದು.

54. ಬಸ್ ನಿಲ್ದಾಣಗಳಲ್ಲಿ ದ್ವಿಚಕ್ರ ವಾಹನ ನಿಲ್ದಾಣಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಟೆಂಡರ್ ಕರೆಯುವಾಗ, ಅಂಗವಿಕಲರ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳಿಗೆ ನಿಲ್ದಾಣದಲ್ಲಿ ಪಾರ್ಕಿಂಗ್ ಮಾಡಲು ಲಭ್ಯವಿರುವ ಸ್ಥಳದಲ್ಲಿ ಕನಿಷ್ಠ ಎರಡು ದ್ವಿಚಕ್ರ / ತ್ರಿಚಕ್ರ / ಕಾರನ್ನು ಅಥವಾ ಲಭ್ಯವಿರುವ ಪಾರ್ಕಿಂಗ್ ಸ್ಥಳದಲ್ಲಿ ಶೇ.2 ರಷ್ಟನ್ನು ಅಂಗವಿಕಲರ ವಾಹನಗಳನ್ನು ಉಚಿತವಾಗಿ ನಿಲ್ಲಿಸಲು ಕಾಯ್ದಿರಿಸುವ ನಿಬಂಧನೆಯನ್ನು ನಿಯಮಾವಳಿಗಳಲ್ಲಿ ಸೇರಿಸಿ, ಟೆಂಡರ್ ಕರೆಯಲು ಕ್ರಮ ಕೈಗೊಳ್ಳುವುದು.
55. ಇನ್ನಿತರ ವಾಣಿಜ್ಯ ಮಳಿಗೆಗಳಿಗೆ ಅನ್ವಯಿಸುವ ನಿಯಮ / ನಿಬಂಧನೆಗಳು ಈ ಸೈಕಲ್/ಸ್ಕೂಟರ್ ನಿಲ್ದಾಣದ ಪರವಾನಗಿದಾರರಿಗೂ ಅನ್ವಯವಾಗುತ್ತವೆ.
56. ಪರವಾನಗಿ ಅವಧಿಯ ಯಾವುದೇ ಸಮಯದಲ್ಲಿ ಉಪ-ಪರವಾನಗಿ ನೀಡಿರುವುದು ಕಂಡು ಬಂದಲ್ಲಿ / ಸಾಬೀತಾದಲ್ಲಿ, ತಕ್ಷಣದಿಂದ ಜಾರಿಗೆ ಬರುವಂತೆ ಪರವಾನಗಿಯನ್ನು ರದ್ದುಪಡಿಸಿ, ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
57. ಟೆಂಡರ್ ಅಥವಾ ಮ್ಯಾನ್ಯುಯಲ್ ಟೆಂಡರ್‌ನಲ್ಲಿ ಆಯ್ಕೆಯಾಗದ ಬಿಡ್‌ದಾರರುಗಳ (H1,H2 & H3 ಹೊರತುಪಡಿಸಿ) ಇ.ಎಂ.ಡಿ. ಮೊತ್ತವನ್ನು ಟೆಂಡರ್ ಅಂತಿಮಗೊಂಡ ನಂತರ ಹಿಂದಿರುಗಿಸುವುದು. H2 ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು H1 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಂಡ ನಂತರ ಹಿಂದಿರುಗಿಸಲಾಗುವುದು. H3 ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು H1 or H2 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಂಡ ನಂತರ ಹಿಂದಿರುಗಿಸಲಾಗುವುದು.
58. ಟೆಂಡರ್‌ನಲ್ಲಿ ಅತಿ ಹೆಚ್ಚು ಮೊತ್ತವನ್ನು ಬಿಡ್‌ಮಾಡಿ ಪರವಾನಗಿದಾರರಾಗಿ ಆಯ್ಕೆಯಾದ ಬಿಡ್‌ದಾರರು ನಿಗದಿತ ದಿನಾಂಕದೊಳಗಾಗಿ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಲು ಹಾಗೂ ಕರಾರು ಮಾಡಿಕೊಳ್ಳಲು ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
59. ಒಂದು ವೇಳೆ ಆಯ್ಕೆಯಾದ ಬಿಡ್‌ದಾರರು ಭದ್ರತಾ ಠೇವಣಿ ಮತ್ತು ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಿ, ನಿಗದಿತ ದಿನಾಂಕದೊಳಗಾಗಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ವಿಫಲರಾದಲ್ಲಿ ಹಾಗೂ ನಿಗದಿತ ದಿನಾಂಕದಲ್ಲಿ ವ್ಯವಹಾರ ಪ್ರಾರಂಬಿಸದೆ ಇದ್ದಲ್ಲಿ ಅಂತಹ ಬಿಡ್‌ದಾರರ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
60. H2 ಬಿಡ್‌ದಾರರನ್ನು ಪರವಾನಗಿದಾರರಾಗಿ ಆಯ್ಕೆ ಮಾಡಿದಾಗ, ಅವರು ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
61. ಟೆಂಡರ್‌ನಲ್ಲಿ ಅರ್ಹಗೊಳ್ಳುವ ಸಲುವಾಗಿ ಬಿಡ್‌ದಾರರು / ಪರವಾನಗಿದಾರರು ಸಲ್ಲಿಸಿರುವ ದಾಖಲೆಗಳು ಯಾವುದೇ ಹಂತದಲ್ಲಿ ನೈಜತೆಯಿಂದ ಕೂಡಿಲ್ಲದಿರುವುದು ಕಂಡುಬಂದಲ್ಲಿ, ಅಂತಹ ಬಿಡ್‌ದಾರರ ಆಯ್ಕೆ / ಪರವಾನಗಿದಾರರ ಪರವಾನಗಿಯನ್ನು ರದ್ದುಪಡಿಸಿ, ನಿಗಮದಲ್ಲಿಟ್ಟಿರುವ ಇ.ಎಂ.ಡಿ. / ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದು. ಅಂತಹ ಬಿಡ್‌ದಾರರನ್ನು / ಪರವಾನಗಿದಾರರನ್ನು ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.
62. ಬಿಡ್‌ದಾರರು ಬಿಡ್ ಹಿಂದಕ್ಕೆ ಪಡೆದಲ್ಲಿ ಅಥವಾ ತಿದ್ದುಪಡಿಗೊಳಿಸಿದಲ್ಲಿ ಅಥವಾ ಅಗೌರವ ತರುವಂತಹ ಸಂದರ್ಭಗಳಲ್ಲಿ, ಇ.ಎಂ.ಡಿ. ಮೊತ್ತ ಮುಟ್ಟುಗೋಲು ಹಾಕಿಕೊಂಡು, ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.
63. ಆಯ್ಕೆಯಾದ ಪರವಾನಗಿದಾರರು ಕನಿಷ್ಠ 02 ವರ್ಷಗಳ ಕಾಲ ಪರವಾನಗಿಯನ್ನು ನಡೆಸಬೇಕು.
64. ಪರವಾನಗಿದಾರರು ಒಂದು ವೇಳೆ 02 ವರ್ಷದೊಳಗೆ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಇಚ್ಛಿಸಿದಲ್ಲಿ, 06 ತಿಂಗಳ ಮುಂಗಡ ನೋಟಿಸ್/ಮನವಿ ನೀಡಬೇಕು. ಮುಂಗಡ ನೋಟಿಸ್/ಮನವಿ ನೀಡುವ ಸಮಯದಲ್ಲಿ ಯಾವುದೇ ಹಿಂಬಾಕಿ ಇರಬಾರದು. ನೋಟಿಸ್/ಮನವಿ ನೀಡಿದ 06 ತಿಂಗಳ ಅವಧಿಯಲ್ಲಿ ಮಳಿಗೆಯನ್ನು ನಡೆಸಲು ಇಚ್ಛಿಸಿದಲ್ಲಿ, ಆಯಾ ತಿಂಗಳು ಮುಂಗಡವಾಗಿ ಪರವಾನಗಿ ಶುಲ್ಕ ಪಾವತಿಸಿಕೊಂಡು ನಡೆಸುವುದು.
65. ಎರಡು ವರ್ಷದ ಅವಧಿಯೊಳಗೆ ಯಾವುದೇ ಕಾರಣದಿಂದ ಪರವಾನಗಿ ರದ್ದುಗೊಳ್ಳುವಂತಹ ಮತ್ತು ಎರಡು ವರ್ಷದ ಅವಧಿಯೊಳಗೆ ಪರವಾನಗಿಯನ್ನು ರದ್ದುಪಡಿಸುವಂತೆ ಮನವಿ ಸಲ್ಲಿಸುವ ಪರವಾನಗಿದಾರರನ್ನು, ಮನವಿ ಸಲ್ಲಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು. ಒಂದು ವೇಳೆ ಪರವಾನಗಿ ರದ್ದತಿಯ ಜಾರಿಯ ದಿನಾಂಕವು ಕರಾರು ಒಪ್ಪಂದದ ಪ್ರಾರಂಭದ ದಿನಾಂಕದಿಂದ 02(ಎರಡು) ವರ್ಷಗಳಿಗೂ ಮೇಲ್ಪಟ್ಟಲ್ಲಿ ಅಂತಹ ಪರವಾನಗಿದಾರರಿಗೆ ಕಪ್ಪುಪಟ್ಟಿಗೆ ಸೇರಿಸುವುದರಿಂದ ವಿನಾಯಿತಿ ಇರುತ್ತದೆ.
66. ಪರವಾನಗಿದಾರರು ಒಂದು ವೇಳೆ 02 ವರ್ಷದ ನಂತರ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಇಚ್ಛಿಸಿದಲ್ಲಿ, 04 ತಿಂಗಳ ಮುಂಗಡ ನೋಟಿಸ್/ಮನವಿ ನೀಡಬೇಕು. ಮುಂಗಡ ನೋಟಿಸ್/ಮನವಿ ನೀಡುವ ಸಮಯದಲ್ಲಿ ಯಾವುದೇ ಹಿಂಬಾಕಿ ಇರಬಾರದು. ನೋಟಿಸ್/ಮನವಿ ನೀಡಿದ 04 ತಿಂಗಳ ಅವಧಿಯಲ್ಲಿ ಮಳಿಗೆಯನ್ನು ನಡೆಸಲು ಇಚ್ಛಿಸಿದಲ್ಲಿ, ಆಯಾ ತಿಂಗಳು ಮುಂಗಡವಾಗಿ ಪರವಾನಗಿ ಶುಲ್ಕ ಪಾವತಿಸಿಕೊಂಡು ನಡೆಸುವುದು.
67. ಪರವಾನಗಿ ಅವಧಿಯ ಯಾವುದೇ ಸಮಯದಲ್ಲಿ ಮಳಿಗೆಯನ್ನು ಉಪ-ಪರವಾನಗಿಗೆ ನೀಡಿರುವುದು ಕಂಡು ಬಂದಲ್ಲಿ, ಪರವಾನಗಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸುವುದು ಹಾಗೂ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದು. ಕರಾರು ರದ್ದುಪಡಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಸದರಿ ಪರವಾನಗಿದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು.
68. ಕಪ್ಪು ಪಟ್ಟಿಗೆ ಸೇರಿದ ಪರವಾನಗಿದಾರರು ನಿಗಮದ ಯಾವುದೇ ಟೆಂಡರ್ / ಸಂಧಾನದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಟೆಂಡರ್ / ಸಂಧಾನದಲ್ಲಿ ಭಾಗವಹಿಸಿದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
69. ಮುಷ್ಕರ / ಬಂದ್ ಅವಧಿಯಲ್ಲಿ ಮಾಸಿಕ ಪರವಾನಗಿ ಶುಲ್ಕದಲ್ಲಿ ರಿಯಾಯಿತಿಗೆ ಅವಕಾಶವಿರುವುದಿಲ್ಲ.

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ

70. ಪರವಾನಗಿದಾರರು ತಮ್ಮ ವ್ಯವಹಾರಕ್ಕೆ ಸಂಬಂಧಿಸಿದ ಜಿ.ಎಸ್.ಟಿ., ಆದಾಯ ತೆರಿಗೆ, ಭವಿಷ್ಯ ನಿಧಿ, ಇ.ಎಸ್.ಐ, ಸೇಲ್ಸ್ ಟ್ಯಾಕ್ಸ ಕ್ಲಿಯರೆನ್ಸ್ ಪ್ರಮಾಣ ಪತ್ರ, ಟ್ರೇಡ್ ಲೈಸೆನ್ಸ್, ಲೇಬರ್ ಲೈಸೆನ್ಸ್, ಫುಡ್ ಲೈಸೆನ್ಸ್ ಇತ್ಯಾದಿ ಪ್ರಮಾಣಪತ್ರಗಳನ್ನು ಹೊಂದಿರಬೇಕು.
71. ಆಯ್ಕೆಗೊಂಡ ಪರವಾನಗಿದಾರರು, ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ (Employees Provident Fund Organisation) ರವರಲ್ಲಿ ನೋಂದಣಿ ಮಾಡಿಸಿಕೊಂಡಿರಬೇಕು. ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಪ್ರತಿ ತಿಂಗಳು ಮಾಸಿಕ ಭವಿಷ್ಯ ನಿಧಿ ವಂತಿಕೆಯನ್ನು ಆರ್.ಸಿ.ಎಫ್.ಸಿ. ರವರಿಗೆ ಜಮಾ ಮಾಡಬೇಕು. ಸಂಬಂಧಿಸದಿದ್ದಲ್ಲಿ, ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.
72. ಆಯ್ಕೆಗೊಂಡ ಪರವಾನಗಿದಾರರು, ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಪಿ.ಎಫ್ / ಇಎಸ್ಐ ಸೌಲಭ್ಯ ವಿಸ್ತರಿಸಿರುವ ಬಗ್ಗೆ ಅಗತ್ಯ ದಾಖಲಾತಿ ಒದಗಿಸುವುದು. ಸಂಬಂಧಿಸದಿದ್ದಲ್ಲಿ, ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.
73. ಆಯ್ಕೆಗೊಂಡ ಪರವಾನಗಿದಾರರು, ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಕನಿಷ್ಟ ವೇತನ, ಪಿ.ಎಫ್, ಇಎಸ್ಐ ಸೌಲಭ್ಯ ನೀಡುವುದು ಮತ್ತು ಪಾವತಿಸಿರುವ ಚಲನ್‌ಗಳನ್ನು ನಿಗಮಕ್ಕೆ ಕಾಲಕಾಲಕ್ಕೆ ಸಲ್ಲಿಸುವುದು.
74. ಬಾಲಕಾರ್ಮಿಕರನ್ನು ನೇಮಿಸಲು ಅವಕಾಶವಿರುವುದಿಲ್ಲ ಮತ್ತು ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು ನಿಯಮಾವಳಿಗಳಿಗೆ ಬದ್ಧರಾಗಿರಬೇಕು.
75. ಸ್ಥಳೀಯ ಇಲಾಖೆ / ಪ್ರಾಧಿಕಾರಗಳು ವಿಧಿಸುವ ತೆರಿಗೆಯನ್ನು ಪರವಾನಗಿದಾರರೇ ಸಂಬಂಧಿಸಿದ ಇಲಾಖೆ / ಪ್ರಾಧಿಕಾರಗಳಿಗೆ ಸಂದಾಯ ಮಾಡಬೇಕು. ಸಂಬಂಧಪಟ್ಟ ತೆರಿಗೆ ಇಲಾಖೆಯಿಂದ ಚಾಲ್ತಿಯಿರುವ ಪ್ರಮಾಣ ಪತ್ರವನ್ನು ಹೊಂದಿರುವುದು ಹಾಗೂ ಕಾಲ ಕಾಲಕ್ಕೆ ನವೀಕರಿಸಿಕೊಳ್ಳುವುದು.
76. ನಿಗಮದ ವ್ಯವಹಾರಕ್ಕೆ ವ್ಯತಿರಿಕ್ತ ಪರಿಣಾಮ ಉಂಟುಮಾಡುವ ವ್ಯವಹಾರವನ್ನು, ನಿಗಮದ ವತಿಯಿಂದ ನಿಷೇದಿಸಲ್ಪಟ್ಟ, ಮುಂದೆ ನಿಷೇಧಿಸಲ್ಪಡುವ ವಸ್ತುಗಳು ಮತ್ತು ಕಾನೂನುಬಾಹಿರ ವಸ್ತುಗಳ ಮಾರಾಟವನ್ನು ಮಳಿಗೆಗಳಲ್ಲಿ ನಿಷೇಧಿಸಲಾಗಿದೆ. ಈ ರೀತಿಯ ವಸ್ತುಗಳ ಮಾರಾಟ ಕಂಡುಬಂದಲ್ಲಿ, ಪರವಾನಗಿಯನ್ನು ರದ್ದುಪಡಿಸುವುದು ಹಾಗೂ ಕಾನೂನು ಕ್ರಮ ಕೈಗೊಳ್ಳಲಾಗುವುದು.
77. ಆಯ್ಕೆಗೊಂಡ ಪರವಾನಗಿದಾರರು ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ಅಗ್ನಿ ರಕ್ಷಕ / ಶಾಮಕ ಉಪಕರಣಗಳನ್ನು ಕಡ್ಡಾಯವಾಗಿ ಅಳವಡಿಸುವುದು. ಅಗ್ನಿ ಅವಘಡ ಹಾಗೂ ಇತರೆ ನೈಸರ್ಗಿಕ ದುರಂತಗಳಿಗೆ ನಿಗಮವು ಜವಾಬ್ದಾರಿಯಾಗಿರುವುದಿಲ್ಲ.
78. ಲಾಡ್ಜಿಂಗ್ & ಡಾರ್ಮಿಟರಿ, ಉಪಹಾರ ಗೃಹ, ಬೇಕರಿ ಮಳಿಗೆಗಳು, ಚಾಟ್ಸ್ ಸೆಂಟರ್ ಇವುಗಳನ್ನು ಹೊರತುಪಡಿಸಿ, ಇತರೆ ಮಳಿಗೆಗಳಲ್ಲಿ ಎಲ್ಲಾ ಮಾದರಿಯ ಸ್ಟೌವ್ / ಗ್ಯಾಸ್ ಬಳಕೆಯನ್ನು ನಿಷೇಧಿಸಲಾಗಿದೆ.
79. ಉಪಹಾರ ಗೃಹಗಳಲ್ಲಿ ಅಡಿಗೆ ಅನಿಲ ಮತ್ತು ವಿದ್ಯುತ್ ಮಾತ್ರ ಉಪಯೋಗಿಸುವುದು. ಉಪಹಾರಗೃಹದಲ್ಲಿ ಕಡ್ಡಾಯವಾಗಿ ಅಗ್ನಿ ರಕ್ಷಕ ಉಪಕರಣ ಅಳವಡಿಸುವುದು.
80. ಯಾವುದೇ ಸಮಯದಲ್ಲಿ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಕರಾರಿನಲ್ಲಿ ಸೇರಿಸಲು ಮತ್ತು ಮಾರ್ಪಡಿಸಲು ನಿಗಮವು ಅಧಿಕಾರ ಹೊಂದಿರುತ್ತದೆ.
81. ಯಾವುದೇ ಕಾರಣ ನೀಡದೇ ಟೆಂಡರನ್ನು ಪುರಸ್ಕರಿಸುವ/ತಿರಸ್ಕರಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
82. ನಿಗಮದಿಂದ ಕರೆಯಲಾಗುವ ಯಾವುದೇ ಟೆಂಡರ್/ಸಂಧಾನವನ್ನು ಯಾವುದೇ ಸಮಯದಲ್ಲಿ ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
83. ತೆರೆದ ಸ್ಥಳ/ಶಾಶ್ವತ ಮಳಿಗೆಗಳನ್ನು ಯಾವ ಸ್ಥಿಯಲ್ಲಿದೆಯೋ ಅದೇ ಸ್ಥಿತಿಯಲ್ಲಿ, ಯಾವಸ್ಥಳದಲ್ಲಿದೆಯೋ ಅದೇ ಸ್ಥಳದಲ್ಲೇ ನೀಡಲಾಗುವುದು ಮತ್ತು ಟೆಂಡರ್‌ನಲ್ಲಿ ನೀಡಿರುವ/ನಮೂದಿಸಿರುವ ಸ್ಥಳದಲ್ಲಿ ಮಾತ್ರ ವ್ಯವಹಾರ ನಡೆಸತಕ್ಕದ್ದು.
84. ಆಯ್ಕೆಯಾದ ಪರವಾನಗಿದಾರರು ಮಳಿಗೆಯಲ್ಲಿ ಆಹಾರ ಪದಾರ್ಥಗಳ ದರಪಟ್ಟಿಯನ್ನು ಸಾರ್ವಜನಿಕರಿಗೆ ಕಾಣುವಂತೆ ಅಳವಡಿಸುವುದು.
85. ಆಯ್ಕೆಗೊಂಡ ಪರವಾನಗಿದಾರರು ಅವರ ಸಿಬ್ಬಂದಿಗಳಿಗೆ ಮೂಲವೇತನ ಕಾಯ್ದೆಯಡಿ, ಕನಿಷ್ಟ ಮೂಲವೇತನ ನೀಡುವುದು ಹಾಗೂ ಇಎಸ್ಐ ಮತ್ತು ಪಿಎಫ್ ಮೊತ್ತವನ್ನು ನಿಯಮಾವಳಿಗಳನ್ವಯ ಕಡಿತಗೊಳಿಸಿ ಸಂಬಂಧಪಟ್ಟ ಇಲಾಖೆಯಲ್ಲಿ ಆನ್‌ಲೈನ್ ಮುಖಾಂತರ ಪಾವತಿಸುವುದು ಹಾಗೂ ದಾಖಲೆಗಳನ್ನು ಕೆಎಸ್ಆರ್‌ಟಿಸಿ., ಅಧಿಕಾರಿಗಳು ಪರಿಶೀಲನೆಗೆ ಕೇಳಿದಾಗ ಪ್ರಸ್ತುತಪಡಿಸಬೇಕಾಗಿರುತ್ತದೆ.
86. ಆಯ್ಕೆಯಾದ ಪರವಾನಿಗೆದಾರರು ಮಳಿಗೆಯ ಮುಂದೆ ಸಾರ್ವಜನಿಕರಿಗೆ ಕಾಣುವ ರೀತಿ ಎಂ.ಆರ್.ಪಿ.ಗಿಂತ ಹೆಚ್ಚಿನ ದರ ವಿಧಿಸಲಾಗುವುದಿಲ್ಲವೆಂಬ ಫಲಕವನ್ನು ಅಳವಡಿಸುವುದು.
87. ಮಳಿಗೆಗಳು/ಸೈಕಲ್/ಸ್ಕೂಟರ್ ನಿಲ್ದಾಣ ನಡೆಸಲು ಆಯ್ಕೆಯಾದ ಪರವಾನಿಗೆದಾರರು ಅಗತ್ಯವಿರುವ ಎಲ್ಲಾ ಪರವಾನಿಗೆ/ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆದುಕೊಂಡು ವ್ಯವಹಾರ ನಡೆಸುವುದು.
88. ಆಯ್ಕೆಯಾಗಿ ಕರಾರು ಮಾಡಿಕೊಂಡಿರುವ ಉಪಹಾರ ಗೃಹಗಳ ಪರವಾನಗಿಯನ್ನು ಮತ್ತೊಂದು ಅವಧಿಗೆ ಮಾತ್ರ(05+05 ವರ್ಷಗಳು) ನವೀಕರಣಕ್ಕೆ ಅವಕಾಶ ಕಲ್ಪಿಸಲಾಗುವುದು. ಸದರಿ ಪರವಾನಗಿದಾರರ ಮನವಿ ಮೇರೆಗೆ, ಪರವಾನಗಿ ಅವಧಿಯಲ್ಲಿನ ಉಪಹಾರಗೃಹದ ನಿರ್ವಹಣೆಯ ಗುಣಮಟ್ಟ ಮತ್ತು ಮಾಸಿಕ ಪರವಾನಗಿ ಶುಲ್ಕ ಪಾವತಿಯನ್ನು ಪರಿಗಣಿಸಿ, ಪರವಾನಗಿ ಶುಲ್ಕದಲ್ಲಿ 6ನೇ ವರ್ಷದಲ್ಲಿ ಶೇ.15ರಷ್ಟು ಹಾಗೂ ತದನಂತರ ಪ್ರತಿವರ್ಷ ಶೇ.10ರಷ್ಟು ಹೆಚ್ಚಳದ ಷರತ್ತಿನೊಂದಿಗೆ 5ವರ್ಷಗಳಿಗೆ ನವೀಕರಿಸಲಾಗುವುದು. ಉಪಹಾರಗೃಹ ಪರವಾನಗಿದಾರರು ನವೀಕರಣಕ್ಕೆ ಇಚ್ಛಿಸಿದ್ದಲ್ಲಿ, 6ತಿಂಗಳ ಮುಂಚಿತವಾಗಿ ಮನವಿ ಸಲ್ಲಿಸಬೇಕು. ಕರಾರು ನವೀಕರಣದ ತೀರ್ಮಾನದ ಹಕ್ಕನ್ನು ನಿಗಮವು ಕಾಯ್ದಿರಿಸಿದೆ.
89. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗೆ ನಿಗದಿಪಡಿಸಿದ ಅವಧಿಯೊಳಗೆ ಅರ್ಜಿ ಸಲ್ಲಿಸುವುದು ಸದರಿ ಸಮಯದಲ್ಲಿ ಉಂಟಾಗುವ ಯಾವುದೇ ತಾಂತ್ರಿಕ ದೋಷಗಳಿಗೆ ಕ.ರಾ.ರ.ಸಾ.ನಿಗಮವು ಜವಾಬ್ದಾರಿಯಾಗಿರುವುದಿಲ್ಲ.

90. ಆಯ್ಕೆಯಾದ ಪರವಾನಗಿದಾರರು ಕಡ್ಡಾಯವಾಗಿ ಮಳಿಗೆಯಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾವನ್ನು ಅಳವಡಿಸಿಕೊಳ್ಳುವುದು.
91. ಪರವಾನಗಿದಾರರು ಕರಾರಿನ ಅವಧಿ ಮುಗಿಯುವ ದಿನ ಮಳಿಗೆಯನ್ನು/ತೆರೆದ ಸ್ಥಳಗಳಲ್ಲಿ ಸ್ಟ್ರಕ್ಚರ್‌ಗಳನ್ನು ತೆರವುಗೊಳಿಸಲು ವಿಳಂಭ ಮಾಡಿದ್ದಲ್ಲಿ ನಿಗಮವು ತೆಗೆದುಕೊಳ್ಳುವ ಕ್ರಮ:-

| ಕ್ರ.ಸಂ | ವಿಳಂಬದ ದಿನಗಳು | ವಿಧಿಸಬೇಕಿರುವ ದಂಡದ ಮೊತ್ತ ಶೇ. ವಾರು |
|---|---|---|
| 1 | ಎಟಿಎಂಕೌಂಟರ್/ ಮಳಿಗೆಯನ್ನು ತೆರವು ಗೊಳಿಸಲು 07 ದಿನಗಳವರೆಗಿನ ವಿಳಂಬಕ್ಕೆ | ಕೊನೆಯ ಅಂತಿಮಗಳ ಪರವಾನಗಿ ಶುಲ್ಕದ ಶೇ.25 ರಷ್ಟು ದಂಡ ಮತ್ತು ಅನ್ವಯಿಸುವ ತೆರಿಗೆಗಳನ್ನು ವಿಧಿಸಲಾಗುವುದು. |
| 2 | ಎಟಿಎಂಕೌಂಟರ್/ಮಳಿಗೆಯನ್ನು ತೆರವು ಗೊಳಿಸಲು 07 ದಿನಗಳ ಮೇಲ್ಪಟ್ಟು, 15 ದಿನಗಳವರೆಗಿನ ವಿಳಂಬಕ್ಕೆ | ಕೊನೆಯ ತಿಂಗಳ ಪರವಾನಗಿ ಶುಲ್ಕದ ಶೇ.50 ರಷ್ಟು ದಂಡ ಮತ್ತು ಅನ್ವಯಿಸುವ ತೆರಿಗಳನ್ನು ವಿಧಿಸಲಾಗುವುದ. |
| 3 | ಎಟಿಎಂಕೌಂಟರ್/ಮಳಿಗೆಯನ್ನು ತೆರವುಗೊಳಿಸಲು 15 ದಿನಗಳ ಮೇಲ್ಪಟ್ಟು, ಒಂದು ತಿಂಗಳವರೆಗಿನ ವಿಳಂಬಕ್ಕೆ | ಕೊನೆಯ ತಿಂಗಳ ಪೂರ್ಣ ಪರವಾನಗಿ ಶುಲ್ಕದಷ್ಟು ದಂಡ ಮತ್ತು ಅನ್ವಯಿಸುವ ತೆರಿಗೆಗಳು |

92. ಒಂದು ತಿಂಗಳೊಳಗಾಗಿ ಮಳಿಗೆಯಲ್ಲಿನ ವಸ್ತುಗಳನ್ನು ಹಾಗೂ ತೆರೆದ ಸ್ಥಳಗಳಲ್ಲಿನ (Structure) ಸ್ಟ್ರಕ್ಚರ್‌ನ್ನು ತೆರವುಗೊಳಿಸಲು ವಿಫಲರಾದಲ್ಲಿ ಅವುಗಳನ್ನು ಮುಟ್ಟುಗೋಲು ಹಾಕಿಕೊಂಡು ಪರವಾನಿಗೆದಾಶರರ ಖರ್ಚಿನಲ್ಲಿ ತೆರವುಗೊಳಿಸಲು/ವಿಲೇವಾರಿ ಮಾಡಲು ನಿಗಮದ ವತಿಯಿಂದ ಕ್ರಮಕೈಗೊಳ್ಳಲಾಗುವುದು.
93. ಮಳಿಗೆಯಲ್ಲಿನ ವಸ್ತುಗಳನ್ನು ಮತ್ತು ತೆರೆದ ಸ್ಥಳಗಳಲ್ಲಿನ (Structure) ಸ್ಟ್ರಕ್ಚರ್ ತೆರವುಗೊಳಿಸಿರುವುದನ್ನು ಖಚಿತಪಡಿಸಿಕೊಂಡು, ಬರಬೇಕಾಗಿರುವ ಬಾಕಿ ಮೊತ್ತವನ್ನು ಹೊಂದಾಣಿಕೆ ಮಾಡಿದ ನಂತರ, ಭದ್ರತಾ ಠೇವಣಿಯನ್ನು ಹಿಂದಿರುಗಿಸಲಾಗುವುದು.
94. ತೆರೆದ ಸ್ಥಳ ಮಳಿಗೆಗಳಿಗೆ ಹಾಲಿ 03 ವರ್ಷಗಳ ಪರವಾನಗಿ ಅವಧಿಯಲ್ಲಿ ಯಾವುದೇ ಡಿಫಾಲ್ಟರ್ ಆಗಿರದೆ ಮಳಿಗೆಯ ಕಾರ್ಯನಿರ್ವಹಣೆ ತೃಪ್ತಿಕರವಾಗಿದ್ದಲ್ಲಿ, 4ನೇ ವರ್ಷದಲ್ಲಿ ಶೇ.15ರಷ್ಟು ಹಾಗೂ ತದನಂತರ ಪ್ರತಿ ವರ್ಷ ಶೇ.10ರಷ್ಟು ಪರವಾನಗಿ ಶುಲ್ಕ ಹೆಚ್ಚಳದೊಂದಿಗೆ ತೆರೆದ ಸ್ಥಳದ ವಾಣಿಜ್ಯ ಮಳಿಗೆಗಳಿಗೆ 03 ವರ್ಷಗಳ ಅವಧಿಗೆ ಪರವಾನಗಿ ನವೀಕರಣಕ್ಕೆ ಅವಕಾಶ ಕಲ್ಪಿಸಲಾಗುವುದು.
95. ಮೇಲ್ಕಂಡಂತೆ ನವೀಕರಣಕ್ಕೆ ಪರವಾನಗಿದಾರರು ಇಚ್ಛಿಸಿದಲ್ಲಿ, 06 ತಿಂಗಳು ಮುಂಚಿತವಾಗಿ ಮನವಿ ಸಲ್ಲಿಸಬೇಕು. ಕರಾರು ನವೀಕರಣದ ಬಗ್ಗೆ ತೀರ್ಮಾನದ ಹಕ್ಕನ್ನು ನಿಗಮವು ಕಾಯ್ದಿರಿಸಿದ್ದು, ನವೀಕರಣದ ಸಮಯದಲ್ಲಿ ಕೇಂದ್ರ ಕಛೇರಿಯ ವಾಣಿಜ್ಯ ಇಲಾಖೆಯ ಮುಖ್ಯಸ್ಥರ ಅನುಮೋದನೆ ಪಡೆದ ನಂತರವಷ್ಟೇ ಮುಂದುವರೆಸಲು ಅವಕಾಶವಿರುತ್ತದೆ.
96. ಮಳಿಗೆಯ ನಾಮಫಲಕವನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಅಳವಡಿಸಿಕೊಳ್ಳುವುದು. ಪ್ರಧಾನವಾಗಿ ಅಂದರೆ ನಾಮಫಲಕದ ಶೇ.60ರಷ್ಟು ಭಾಗ ಕನ್ನಡವನ್ನು ಬಳಸತಕ್ಕದ್ದು.
97. ನಾಮ ಫಲಕವನ್ನು ಮಳಿಗೆಯ ಸಂಖ್ಯೆ/ಬಸ್ ನಿಲ್ದಾಣದ ಬಣ್ಣವನ್ನು ಹಾಳುಮಾಡುವಂತೆ ಶಾಶ್ವತವಾಗಿ ಬರೆಸುವುದನ್ನು ನಿಷೇಧಿಸಿದೆ.
98. ನಾಮ ಫಲಕವನ್ನು ಸರಳವಾಗಿ ಮಳಿಗೆಯ ವಿಸ್ತೀರ್ಣಕ್ಕೆ ಮಾತ್ರ ಬ್ಯಾನರ್‌ನಲ್ಲಿ ಪ್ರಿಂಟ್ ಮಾಸಿಕೊಳ್ಳುವುದು ಮತ್ತು ಕರಾರು ಮುಕ್ತಾಯದ ನಂತರ ಪರವಾನಗಿದಾರರೇ ನಿಗಮ ಆಸ್ತಿ ಹಾಳಾಗದಂತೆ/ಬಣ್ಣ ಹಾಳಾಗದಂತೆ ತೆರವುಗೊಳಿಸಿಕೊಳ್ಳಬೇಕು. ತಪ್ಪಿದಲ್ಲಿ ಆಗುವ ನಷ್ಟವನ್ನು ಭದ್ರತಾ ಠೇವಣಿಯಲ್ಲಿ ಮುರಿದುಕೊಳ್ಳಲಾಗುವುದು.
99. ಮೇಲ್ಕಂಡ ಕೆ.ಆರ್.ಪೇಟೆ ಬಸ್ ನಿಲ್ದಾಣದ ಇ-ಟೆಂಡರ್ ಕರೆಯಲಾದ ಕ್ರಮ ಸಂಖ್ಯೆ 6 ರಿಂದ 14ರವರೆಗಿನ ಮಳಿಗೆಗಳಿಗೆ ಆಯ್ಕೆಯಾದ ಪರವಾನಗಿದಾರರು ಇ-ಟೆಂಡರ್ ನಿಯಮಾವಳಿಗಳಂತೆ ಭದ್ರತಾ ಠೇವಣಿ ಹಾಗೂ ಮುಂಗಡ ಪರವಾನಗಿ ಶುಲ್ಕ ಸ್ಟ್ಯಾಂಪ್ ಪೇಪರ್‌ನ್ನು ನಿಗಧಿತ ಅವಧಿಯಲ್ಲಿ ಸಲ್ಲಿಸುವುದು. ಸದರಿ ಮಳಿಗೆಗಳ ಕಾಮಗಾರಿ ಮುಕ್ತಾಯವಾಗಿ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಹಸ್ತಾಂತರಿಸಿದ ನಂತರ ಕರಾರು ಒಪ್ಪಂದ ಮಾಡಿಕೊಳ್ಳುವುದು.

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ.ನಿಗಮ,ಮಂಡ್ಯ ವಿಭಾಗ, ಮಂಡ್ಯ

**ಗೌರವ ಪೂರ್ವಕವಾಗಿ ಪ್ರತಿಯನ್ನು:-**

1. ಮುಖ್ಯ ಸಂಚಾರ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಬೆಂಗಳೂರುರವರಿಗೆ ಹಾಗೂ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿರವರಿಗೆ ಮಾಹಿತಿಗಾಗಿ.
2. ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿ, ವಾ.ಕ.ರ.ಸಾ.ನಿ, ಈ.ಕ.ರ.ಸಾ.ನಿ, ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.

**ಪ್ರತಿಯನ್ನು:-**

1. ಘಟಕ ವ್ಯವಸ್ಥಾಪಕರು ಮಂಡ್ಯ, ಮದ್ದೂರು, ಮಳವಳ್ಳಿ, ನಾಗಮಂಗಲ, ಕೆ,ಆರ್.ಪೇಟೆ ಹಾಗೂ ಪಾಂಡವಪುರ ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಘಟಕದ & ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಲು ಸೂಚಿಸಲಾಗಿದೆ. ಎಲ್ಲಾ ಘಟಕ ವ್ಯವಸ್ಥಾಪಕರುಗಳ ಮಾಹಿತಿಗಾಗಿ, ಹಾಗೂ ಹಾಗೂ ಘಟಕ ವ್ಯವಸ್ಥಾಪಕರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್/ನೀರಿನ ವ್ಯವಸ್ಥೆ ಇಲ್ಲದಿರುವ ಬಗ್ಗೆ ಮಾಹಿತಿಯನ್ನು ಸಂಚಾರ ಶಾಖೆಗೆ ನೀಡುವುದು ಹಾಗೂ ಟೆಂಡರ್ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದೊಳಗೆ ಸರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.
2. ವಿಭಾಗೀಯ ಸಂಚಲನಾಧಿಕಾರಿ/ಸಹಾಯಕ ಕಾನೂನು ಅಧಿಕಾರಿ/ ಭದ್ರತಾ & ಜಾಗೃತಾಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಸಹಾಯಕ ಲೆಕ್ಕಾಧಿಕಾರಿ, ಮಂಡ್ಯ ವಿಭಾಗರವರುಗಳು ಇ-ಟೆಂಡರ್/ಮ್ಯಾನ್ಯುಯಲ್ ಟೆಂಡರ್ ತೆರೆಯುವ/ನಡೆಸುವ ಸಮಯದಲ್ಲಿ ಹಾಜರಿರಲು ಸೂಚಿಸಲಾಗಿದೆ ಹಾಗೂ ಸ.ಕಾ.ನಿ.ಅ.ರವರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್ ಕೆಲಸಗಳನ್ನು ಟೆಂಡರ್ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದೊಳಗೆ ಸರಿಪಡಿಸಿ ನೀಡಲು ತಿಳಿಸಲಾಗಿದೆ.

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ

## (ಮ್ಯಾನ್ಯುಯಲ್ ಟೆಂಡರ್ ಅರ್ಜಿ ನಮೂನೆ)

**ಇಂದ,**

-------------------------------

-------------------------------

-------------------------------          **ಇ-ಮೇಲ್ ವಿಳಾಸ**_______________________

-------------------------------          **ಮೊ/ ದೂರವಾಣಿ ಸಂಖ್ಯೆ**___________________

**ಗೆ,**

ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ.ನಿಗಮ,
ಮಂಡ್ಯ ವಿಭಾಗ, ಮಂಡ್ಯ.

**ಮಾನ್ಯರೇ,**

**ವಿಷಯ:-** ___________________ಬಸ್ ನಿಲ್ದಾಣ __________________ಮಳಿಗೆಯ ಅರ್ಜಿ ಸಲ್ಲಿಸುತ್ತಿರುವ ಬಗ್ಗೆ.

**ಉಲ್ಲೇಖ:-** ಮ್ಯಾನ್ಯುಯಲ್ ಟೆಂಡರ್ ಪ್ರಕಟಣೆ ಸಂ.________________ ದಿನಾಂಕ :_____________.

******

**ಮೇಲ್ಕಂಡ ಉಲ್ಲೇಖಿತ ಮ್ಯಾನ್ಯುಯಲ್ ಟೆಂಡರ್ ರೀತ್ಯಾ ನಾನು ಮಂಡ್ಯ ವಿಭಾಗದ ವ್ಯಾಪ್ತಿಯಲ್ಲಿ ಬರುವ__________________ಬಸ್ ನಿಲ್ದಾಣದಲ್ಲಿ ______________________ ವಾಣಿಜ್ಯ ಮಳಿಗೆ ನಡೆಸಲು ದರ ಪಟ್ಟಿಯನ್ನು ಸಲ್ಲಿಸುತ್ತಿದ್ದು, ಇದಕ್ಕಾಗಿ ನಾನು ಈ ಕೆಳಕಂಡಂತೆ ನನ್ನ ದರವನ್ನು ನಮೂದಿಸಿರುತ್ತೇನೆ.**

ಬಿಡ್ ಮಾಡಿರುವ ಮಾಸಿಕ ಪರವಾನಗಿ ಶುಲ್ಕ ರೂ.---------------.**(ಜಿಎಸ್‌ಟಿ ಹೊರತುಪಡಿಸಿ)** (ಅಕ್ಷರಗಳಲ್ಲಿ -----------
---------------------------------------------)

ನಾನು ತಮ್ಮ ಮ್ಯಾನ್ಯುಯಲ್ ಟೆಂಡರ್‌ನ **ಷರತ್ತು ನಿಭಂದನೆಗಳಿಗೆ ಒಳಪಟ್ಟು ಸಲ್ಲಿಸುತ್ತಿದ್ದು, ನಾನು ತಮ್ಮ ಮ್ಯಾನ್ಯುಯಲ್ ಟೆಂಡರ್ ಪ್ರಕಟಣೆಯಲ್ಲಿ ನಮೂದಿಸಿರುವ ನಿಯಮಗಳನ್ನು ಓದಿ ತಿಳಿದು ಅವುಗಳಿಗೆ ನಾನು ಬದ್ಧನಾಗಿರುತ್ತೇನೆ.**

ಇದರೊಂದಿಗೆ ನಾನು ನಿಗಧಿತ ಇ.ಎಂ.ಡಿ. ಮೊಬಲಗನ್ನು ರೂ._______________ ದಿನಾಂಕ:__________. ದ ಧನಾದೇಶ ಸಂಖ್ಯೆ. ಗಳನ್ನು ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಮಂಡ್ಯ ವಿಭಾಗ ರವರ ಹೆಸರಿಗೆ ತೆಗೆದು ಈ ಅರ್ಜಿಯೊಂದಿಗೆ ಅಗತ್ಯ ದಾಖಾಲಾತಿಗಳನ್ನು ಈ ಅರ್ಜಿಯೊಂದಿಗೆ ಟೆಂಡರ್ ಬಾಕ್ಸ್‌ನಲ್ಲಿ ಸಲ್ಲಿಸಿರುತ್ತೇನೆ.

**ವಂದನೆಗಳೊಂದಿಗೆ,**

**ದಿನಾಂಕ:**----------

(ಅರ್ಜಿದಾರರ ಸಹಿ)

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ

(ಭರ್ತಿ ಹಾಗೂ ಸಹಿ ಮಾಡಿ ಸಲ್ಲಿಸುವುದು)

**ಅನುಬಂಧ-1**(Annexure-1)

ರಿಂದ:

ಶ್ರೀ _______________ ದೂರವಾಣಿ ಸಂ._______________

_______________ ಇ-ಮೇಲ್ ವಿಳಾಸ:_____________________________

_______________

_______________

ರಿಗೆ:
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ:
ಮಂಡ್ಯ ವಿಭಾಗ.

ಮಾನ್ಯರೇ,

ವಿಷಯ: ಯಾವುದೇ ರೀತಿಯಲ್ಲಿ **Defaulter ಆಗಿಲ್ಲದಿರುವ ಹಾಗೂ** ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಾನು ಇ-ಟೆಂಡರ್/ಮ್ಯಾನ್ಯುಯಲ್ ಟೆಂಡರ್ ಪ್ರಕಟಣೆ ಸಂ.06/2021-22 ದಿ:02.11.2021ರಂತೆ ____________ಬಸ್ ನಿಲ್ದಾಣದ ___________________ಮಳಿಗೆಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಇಚ್ಛಿಸಿರುತ್ತೇನೆ. ನಾನು ಕ.ರಾ.ರ.ಸಾ.ನಿಗಮ/ ಬೆಂ.ಮ.ಸಾ.ಸಂ./ ವಾ.ಕ.ರ.ಸಾ.ಸಂ./ ಈ.ಕ.ರ.ಸಾ.ಸಂ. ಸೇರಿದ ಯಾವುದೇ ವಿಭಾಗದಲ್ಲಿ ವಾಣಿಜ್ಯ ಮಳಿಗೆಗಳ/ಜಾಹೀರಾತು ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯಲ್ಲಿ **Defaulter ಆಗಿರುವುದಿಲ್ಲ ಹಾಗೂ ಕಪ್ಪುಪಟ್ಟಿಗೆ ಸೇರಿಲ್ಲವೆಂದು** ಈ ಮೂಲಕ ದೃಢೀಕರಿಸುತ್ತೇನೆ. ನಾನು ಒದಗಿಸಿರುವ ಮಾಹಿತಿಯು ಸತ್ಯವೆಂದು ದೃಢೀಕರಿಸುತ್ತೇನೆ. ನಾನು ಒದಗಿಸಿರುವ ಮಾಹಿತಿಯು ಅಸತ್ಯವೆಂದು ದೃಢಪಟ್ಟಲ್ಲಿ ನಿಗಮವು ತೆಗೆದುಕೊಳ್ಳುವ ನಿರ್ಧಾರಗಳಿಗೆ ಬದ್ಧನಾಗಿರುತ್ತೇನೆಂದು ಪ್ರಮಾಣಿಕರಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ದಿ:

( ಸಹಿ ಮತ್ತು ಹೆಸರು)

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮಂಡ್ಯ ವಿಭಾಗ:: ಮಂಡ್ಯ

(ಭರ್ತಿ ಹಾಗೂ ಸಹಿ ಮಾಡಿ ಸಲ್ಲಿಸುವುದು ಮೀಸಲಾತಿಯಡಿ ಇರುವ ಮಳಿಗೆಗಳಿಗೆ ಮಾತ್ರ)

ಅನುಬಂಧ-2 (Annexure-2)

ರಿಂದ:

ಶ್ರೀ _______________ ದೂರವಾಣಿ ಸಂ.______________

_________________ ಇ-ಮೇಲ್ ವಿಳಾಸ:___________________________

_________________

_________________

ರಿಗೆ:
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ:
ಮಂಡ್ಯ ವಿಭಾಗ.

ಮಾನ್ಯರೇ,

ವಿಷಯ: ಯಾವುದೇ ರೀತಿಯಲ್ಲಿ ಮೀಸಲಾತಿ ಆಧಾರದ ಮೇಲೆ ಜಾಹೀರಾತು/ವಾಣಿಜ್ಯ ಮಳಿಗೆ ಪಡೆದಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಾನು ಇ-ಟೆಂಡರ್ ಪ್ರಕಟಣೆ ಸಂಖ್ಯೆ:06/2021-22 ದಿ: 02.11.2021ರಂತೆ____________ಬಸ್ ನಿಲ್ದಾಣದ ___________________ಮಳಿಗೆಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಇಚ್ಚಿಸಿರುತ್ತೇನೆ. ನಾನು ಕ.ರಾ.ರ.ಸಾ.ನಿಗಮ/ಬೆಂ.ಮ.ಸಾ.ಸಂ./ವಾ.ಕ.ರ.ಸಾ.ಸಂ./ಈ.ಕ.ರ.ಸಾ.ಸಂ. ಸೇರಿದ ಯಾವುದೇ ವಿಭಾಗದಲ್ಲಿ ಯಾವುದೇ ರೀತಿಯಲ್ಲಿ ಮೀಸಲಾತಿ ಆಧಾರದ ಮೇಲೆ ಜಾಹೀರಾತು/ವಾಣಿಜ್ಯ ಮಳಿಗೆಯನ್ನು ಪಡೆದಿರುವುದಿಲ್ಲವೆಂದು ಈ ಮೂಲಕ ಸ್ವಯಮ ದೃಢೀಕರಿಸಿರುತ್ತೇನೆ. ನಾನು ಒದಗಿಸಿರುವ ಮಾಹಿತಿಯು ಸತ್ಯವೆಂದು ದೃಢೀಕರಿಸುತ್ತೇನೆ. ನಾನು ಒದಗಿಸಿರುವ ಮಾಹಿತಿಯು ಅಸತ್ಯವೆಂದು ದೃಢಪಟ್ಟಲ್ಲಿ ನಿಗಮವು ತೆಗೆದುಕೊಳ್ಳುವ ನಿರ್ಧಾರಗಳಿಗೆ ಬದ್ಧನಾಗಿರುತ್ತೇನೆಂದು ಪ್ರಮಾಣಿಕರಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ದಿ:

( ಸಹಿ ಮತ್ತು ಹೆಸರು )